ನವಸಾಕ್ಷರ ಪುಸ್ತಕ ಮಾಲೆ ೬೨

ನಿಸರ್ಗ - ಜಲಪಾತಗಳು

ಡಾ. ಶ್ರೀಪಾದಶೆಟ್ಟಿ



ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೬೭

ನಿಸರ್ಗ - ಜಲಪಾತಗಳು

ಡಾ. ಶ್ರೀಪಾದಶೆಟ್ಟಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೬

NISARGA-JALAPATHAGALU : By Dr. Sripadashetty. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್‍ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ನಿಸರ್ಗ - ಜಲಪಾತಗಳು

ನಿಸರ್ಗವೇ ಒಂದು ವಿಸ್ಮಯ. ಅದು ಭೂಮಿಯ ಮೇಲಿರುವ ದೇವಲೋಕ. ನಿಸರ್ಗ ಪ್ರತಿಸಲವೂ ಹೊಸತನ್ನು ತೆರೆದು ತೋರುತ್ತದೆ. ಎಲ್ಲಿಯೂ ಮುಗಿಯದ ನೀಲಿ ಬಾನಿನದೇ ಒಂದು ಬಗೆಯ ಚೆಂದ. ರಾತ್ರಿ ಆಕಾಶದಲ್ಲಿ ತಾರೆಗಳು ಮುತ್ತಿನ ಬೀಜಗಳಂತೆ ಕಾಣುತ್ತವೆ. ಮೋಡಗಳ ಮರೆಯಲ್ಲಿ ನಗುವ ಚಂದಿರ ತುಂಬಾ ಸುಂದರ. ಮೋಡಗಳು ಬಗೆ ಬಗೆಯ ಆಕಾರ ತಾಳುವ ಬಹುರೂಪಿಗಳು. ಮೋಡ ನೀಲಿಯ ಆಗಸದಲ್ಲಿ ತೇಲುವ ದೋಣಿಯ ಹಾಗೆ ಕಾಣುತ್ತದೆ. ಅದನ್ನು ಕವಿಗಳು ಬಹಳ ರೀತಿಯಲ್ಲಿ ವರ್ಣಿಸಿದ್ದಾರೆ. ಅದು ದುರ್ಗಾದೇವಿಯ ವಾಹನ ಸಿಂಹದಂತೆ ಕಂಡಿದೆ. ಕುರಿಮರಿಗಳ ಹಿಂಡಿನಂತೆ, ಒಮ್ಮೆ ಕಾಣಿಸಿದೆ. ಇನ್ನೊಮ್ಮೆ ಆನೆ, ಹುಲಿ, ಹಾವು, ಕಾಡುಕೋಣವಾಗಿ ಕಂಡಿದೆ. ಕವಿ ಕಾಳಿದಾಸ ತನ್ನ ನಲ್ಲೆಗೆ ಮೋಡಗಳ ಮೂಲಕ ಪ್ರೇಮ ಸಂದೇಶ ಕಳಿಸಿದ್ದಾನೆ. ಬಾನು ಬಗೆಬಗೆಯ ಬಣ್ಣದಿಂದ ದಿಗಿಲು ಹುಟ್ಟಿಸುತ್ತದೆ.

ದಿನವೂ ಹೊಸದಾಗುವ ಗಂಭೀರವಾದ ಸಮುದ್ರದ ಬಗೆಯೇ ಬೇರೆ. ಎಲ್ಲಾ ಕಡೆಯಲ್ಲಿಯೂ ನೀರು. ದಡಕ್ಕೆ ಅಪ್ಪಳಿಸುವ ತೆರೆಗಳದ್ದೇ ಒಂದು ಚೆಂದ. ಮರಳಿನ ಚಾಪೆ ಹಾಸಿದಂತೆ ಸಮತಟ್ಟಾಗಿ ಹಾಸಿಕೊಂಡ ಕಡಲತೀರ, ನಯನ ಮನೋಹರ.

ಸಾಗರದಲ್ಲಿ ಚಲಿಸುವ ದೊಡ್ಡ ಹಡಗುಗಳದೇ ಒಂದು ರೀತಿ. ಏಳುತ್ತಾ ಬೀಳುತ್ತಾ ತೆರೆಗಳ ಆಚೆ ತೇಲುತ್ತಾ ಸಾಗುವ ಪುಟ್ಟ ಪಾತಿ ದೋಣಿಗಳನ್ನು ನೋಡುವುದೇ ಒಂದು ಖುಷಿ. ಕಡಲ ತಡಿಯಲ್ಲಿ ನಿಂತು ಪೂರ್ವಕ್ಕೆ ನೋಡಿದರೆ ಗುಡ್ಡಗಳ ಸಾಲು ಕಾಣುತ್ತದೆ. ಇವು ಇನ್ನೂರು ಮುನ್ನೂರು ಐನೂರು ಅಡಿ ಎತ್ತರವಾಗಿವೆ. ಈ ಗುಡ್ಡ ಬೆಟ್ಟಗಳ ನಡುವೆ ಹಳ್ಳ, ಕೊಳ್ಳ ಕಣಿವೆಗಳು ಚಿತ್ರವಿಚಿತ್ರವಾಗಿ ಹಬ್ಬಿಕೊಂಡಿದೆ. ಬೆಟ್ಟದಲ್ಲಿ ನಿಂತು ಎಡ-ಬಲಕ್ಕೆ ನೋಡಿದರೆ ಗುಡ್ಡದ ಸಾಲುಗಳು ಕಾಣಿಸುತ್ತವೆ. ಕೆಲವು ಗುಡ್ಡ ಹಸುರಿಲ್ಲದ ಕಂದು ಬಣ್ಣ ಮಣ್ಣಿನ ದಂಡೆಗಳಿಂದ ಬಗೆಬಗೆಯ ಆಕಾರದ ಬಂಡೆಗಳಿಂದ ತುಂಬಿರುತ್ತದೆ. ಮತ್ತೆ ಕೆಲವು ಹುಲ್ಲಿನ ಹಸಿರು ಹೊದಿಕೆ ಹೊತ್ತು ಗಿಡಮರಗಳಿಂದ ತುಂಬಿಕೊಂಡು ಸೊಂಪಾಗಿ ಕಾಣುತ್ತದೆ.

ಗುಡ್ಡಗಳ ತಗ್ಗಿನಲ್ಲಿ ರೈತರು ಸಮತಟ್ಟು ಮಾಡಿದ ಗದ್ದೆಯ ಅಂಕಣಗಳು ನೋಡಲು ಚೆಂದ. ತೆಂಗು, ಅಡಿಕೆ, ಬಾಳೆಯ ತೋಟ ಹಾಗೂ ಕಬ್ಬು, ಭತ್ತದ ಪೈರಿನಿಂದ ಹಸುರಾಗಿ ಕಾಣಿಸುವ ಗದ್ದೆಗಳದು ತುಂಬಾ ಚೆಂದದ ನೋಟ. ಗುಡ್ಡವನ್ನೇರಿ ಪಶ್ಚಿಮ ದಿಕ್ಕಿಗೆ ನೋಡಿದರೆ ಸಮುದ್ರ ವಿಶಾಲವಾಗಿ ಕಾಣುತ್ತದೆ. ದಿಗಂತದ ಅಂಚಿನವರೆಗೆ, ಕಣ್ಣು ಚಾಚುವಷ್ಟು ದೂರ ನೀಲಿ ಕಡಲಿನ ಸೆರಗು ಮನೋಹರವಾಗಿ ಹಾಸಿರುತ್ತದೆ.

ಪೂರ್ವದಿಕ್ಕಿಗೆ ಹೋದರೆ ನಮ್ಮ ದಾರಿ ಮತ್ತೆ ಮೇಲೆ ಏರುತ್ತದೆ. ಗುಡ್ಡಗಳ ಸಂಖ್ಯೆ ಹೆಚ್ಚಾಗುತ್ತದೆ. ದಾರಿಯ ಆಚೀಚೆ ಗಿಡಮರಗಳಿಂದ ತುಂಬಿದ ಕಾಡು ಸಿಗುತ್ತದೆ. ಗುಡ್ಡದ ಏರಿನಲ್ಲಿ ತಗ್ಗಿನಲ್ಲಿ ಕಾಡು ಕಾಣುತ್ತದೆ. ಅನೇಕ ಕಡೆ ಕಾಡಿನ ದಾರಿಯಲ್ಲಿ ನದಿಗಳು ಅಡ್ಡ ಬರುತ್ತವೆ. ಅದನ್ನು ದಾಟಿ ಮುಂದೆ ನಡೆದರೆ ದಾರಿ ಅಂಕುಡೊಂಕಾಗಿ ಏರುತ್ತಾ ಮುಂದೆ ಹೋಗುತ್ತದೆ. ಕೊನೆಗೆ ಮೂಡಣ ದಿಕ್ಕಿನಲ್ಲಿ ಕಡಿದಾದ ಪರ್ವತಗಳು ಇದಿರಾಗುತ್ತವೆ. ಇವು ಪಶ್ಚಿಮ ಘಟ್ಟಗಳು. ಇವುಗಳನ್ನು ಸಹ್ಯಾದ್ರಿ ಎಂದೂ ಕರೆಯುತ್ತಾರೆ.

ಕರ್ನಾಟಕದ ಉತ್ತರದಿಂದ ದಕ್ಷಿಣದವರೆಗೆ ಮತ್ತು ಅದರ ಆಚೆಈಚೆ ಈ ಬೆಟ್ಟಗಳ ಸಾಲು ನಿಂತಿವೆ. ಇಲ್ಲಿ ತುಂಬಾ ದಟ್ಟವಾದ ಕಾಡು ಇದೆ. ಪಡುವಣ



ನಿಸರ್ಗ

ದಿಕ್ಕಿನಿಂದ ಬರುವ ಮೋಡಗಳು ಈ ಪರ್ವತಗಳನ್ನು ಚುಂಬಿಸಿಯೇ ಮುಂದೆ ಸರಿಯಬೇಕು. ಈ ಪರ್ವತದ ಎಂಟು ಹತ್ತು ಕಡೆಗಳಲ್ಲಿ ತಿರುವುಮುರುವುಗಳಿಂದ ಕೂಡಿದ ಅಂಕುಡೊಂಕಾದ ರಾಜ್ಯ ಹೆದ್ದಾರಿಗಳಿವೆ. ಬಸ್ಸಿನಲ್ಲಿ ಕಡಿದಾದ ಈ ಮಾರ್ಗದಲ್ಲಿ ಪಯಣಿಸುವುದೇ ಒಂದು ಅನುಭವ. ಪಶ್ಚಿಮ ಘಟ್ಟದ ತುದಿಯಲ್ಲಿ ನಿಂತು ಕರಾವಳಿಯತ್ತ ನೋಡಿದರೆ ಮುಂದಿನ ನೆಲ ಹಸಿರು ತುಂಬಿ, ಇಂದ್ರನ ನಂದನವನದಂತೆ ಕಾಣುತ್ತದೆ. ಅಲ್ಲಿ ಎಷ್ಟೋ ನದಿಗಳು ಹರಿದು ಸಾಗರ ಸೇರುತ್ತವೆ. ಸಮುದ್ರದ ಉಬ್ಬರವಿಳಿತಕ್ಕೆ ಅನುಗುಣವಾಗಿ ನದಿಯಲ್ಲೂ ಏರಿಳಿತ ಬರುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುವ ನದಿ ರುದ್ರರಮಣೀಯವಾಗಿ ಕಾಣುತ್ತದೆ. ಅಂಕು ಡೊಂಕಾಗಿ ಹಾವಿನಂತೆ ಹರಿಯುವ ಈ ನದಿಗಳಲ್ಲಿ ಗುಂಪಾಗಿ, ಒಂಟಿಯಾಗಿ ಚಲಿಸುವ ಮೀನುಗಳನ್ನು ನೋಡುವುದೇ ಚೆಂದ. ಆಗಾಗ ನದಿಯಲ್ಲಿ ಮೇಲೆ ಹಾರುವ ಮೀನುಗಳು ಸೂರ್ಯನ ಬಿಸಿಲಲ್ಲಿ ಪಳಪಳ ಹೊಳೆಯುತ್ತವೆ. ನದಿಗೆ ಕಣ್ಣುಮೂಡಿತೇನೋ ಎಂಬಂತೆ ಕಾಣುತ್ತದೆ. ಪರ್ವತಗಳ ಇಳಿಜಾರಿನಲ್ಲಿ ನದಿ ಹರಿದುಬರುವಾಗ ಜಲಪಾತಗಳು ನಿರ್ಮಾಣಗೊಂಡಿವೆ. ಇವುಗಳನ್ನು ನೋಡುವುದೇ ಒಂದು ಹಬ್ಬ.

ಅಲ್ಲಿಂದ ಮುಂದೆ ಪೂರ್ವದ ಕಡೆಗೆ ಹೋದರೆ ಮುಂದಿನ ದಾರಿ ಸ್ವಲ್ಪ ಇಳಿಯುತ್ತಾ ಸಾಗುತ್ತದೆ. ಹತ್ತಿಪ್ಪತ್ತು ಮೈಲು ಗುಡ್ಡದ ಮಗ್ಗುಲುಗಳ ಮೂಲಕ ನಡೆಯಬೇಕು. ಆ ನಂತರ ಬಯಲುಸೀಮೆ ಸಿಗುತ್ತದೆ. ಕಣ್ಣು ಚಾಚುವವರೆಗೂ ಸಮತಟ್ಟಾದ ಭೂಮಿಯೇ ಕಾಣುತ್ತದೆ. ಇಲ್ಲಿ ವಿರಳವಾಗಿ ಗುಡ್ಡಗಳು ಕಾಣಸಿಗುತ್ತವೆ. ವಿಸ್ತಾರವಾದ ಫಲವತ್ತಾದ ಈ ಬಯಲುನಾಡಿನಲ್ಲಿ ಗೋಧಿ, ಜೋಳ, ಕಡಲೆ, ಮೆಣಸುಗಳಿಂದ ಕೂಡಿದ ಹೊಲವನ್ನು ನೋಡುವುದೇ ಚೆಂದ. ಎಕರೆಗಟ್ಟಲೆ ವಿಸ್ತೀರ್ಣದಲ್ಲಿ ಬೆಳೆದುನಿಂತ ಸೂರ್ಯಕಾಂತಿ ಹೂವುಗಳು ಚೆಂದ. ಇವು ಕಾಣುವ ಕಣ್ಣಿಗೆ ಅತ್ಯಂತ ಆನಂದ ನೀಡುತ್ತವೆ. ಸೂರ್ಯಕಾಂತಿ ಗಿಡಗಳ ಮೇಲೆ ಗಾಳಿ ಬೀಸಿದಾಗ ಅದರ ಹಸಿರು ಎಲೆಗಳು ಬೀಸಣಿಗೆ ಹಿಡಿದು ಬೀಸುವಂತೆ ಕಾಣುತ್ತವೆ. ಒಂದೊಂದು ಗಿಡದ ಮೇಲೆ ಬಟ್ಟಲು ಗಾತ್ರದ ಹತ್ತೆಂಟು ಹೂವು ಅರಳಿರುತ್ತವೆ. ಕಿಲಕಿಲ ನಗುವ ಹುಣ್ಣಿಮೆಯ ಚಂದ್ರನಂತೆ ಇವು

ಒಂದೇ ದಿಕ್ಕಿಗೆ ಮುಖ ಮಾಡಿಕೊಂಡಿರುತ್ತವೆ. ಸಾವಿರಾರು ಸೂರ್ಯಕಾಂತಿಯ ಗಿಡಗಳು ಬೀಸುವ ಗಾಳಿಗೆ ತೂರಾಡುವಾಗ ದೇವತೆಗಳು ಭೂಮಿಗೆ ಇಳಿದು ಬಂದು ಹಬ್ಬ ಮಾಡುತ್ತಿದ್ದಂತೆ ಅನಿಸುತ್ತದೆ. ಹುಚ್ಚೆಳ್ಳಿನ ಪೈರುಗಳು ಬಲಿತಾಗ ಕಣ್ಣಿಗೆ ಹಬ್ಬವಾಗುತ್ತದೆ. ಇಡೀ ಹೊಲ ಹಳದಿ ಹೂವಿನ ಚಾದರನ್ನು ಹೊದೆದುಕೊಂಡಂತೆ ಕಾಣುತ್ತದೆ. ನಿಂಬೆ ಹಣ್ಣಿನ ಬಣ್ಣದ ಹುಚ್ಚೆಳ್ಳಿನ ಹೂವುಗಳು ಎಲೆಯ ಹಸಿರು ಕಾಣದಂತೆ ಆವರಿಸಿಕೊಂಡಿರುತ್ತವೆ.

ನಿಸರ್ಗ ದಿನದಿಂದ ದಿನಕ್ಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಮುಂಜಾವಿನಲ್ಲಿ ಅದು ಒಂದು ರೀತಿಯಾಗಿ ಕಂಡರೆ ಮಧ್ಯಾಹ್ನ ಮತ್ತೊಂದು ಬಗೆಯಾಗಿರುತ್ತದೆ. ಸಂಜೆಯಲ್ಲಿ ನಿಸರ್ಗ ಇನ್ನೊಂದು ತೆರನಾಗಿರುತ್ತದೆ. ಒಂದೊಂದು ಸೂರ್ಯೋದಯ ಚಂದ್ರೋದಯ, ಸೂರ್ಯಾಸ್ತ, ಚಂದ್ರಾಸ್ತ ಒಂದೊಂದು ಬಗೆಯಾಗಿರುತ್ತದೆ.

"ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ"

ಎಂದು ಕವಿ ಕುವೆಂಪು ಹಾಡಿದ್ದಾರೆ. ಮಳೆಗಾಲ, ಚಳಿಗಾಲ, ಬೇಸಿಗೆ ಕಾಲದಲ್ಲಿ ನಿಸರ್ಗ ಬೇರೆ ಬೇರೆ ರೀತಿಯಲ್ಲಿ ಕಾಣುತ್ತವೆ. ಮಳೆಗಾಲದಲ್ಲಿ ಧೋ ಧೋ ಸುರಿವ ಮಳೆಯೊಂದಿಗೆ ಬಿರುಗಾಳಿ ಬೀಸುತ್ತದೆ. ಭೂಮಿ ಕೆಸರಾಗಿರುತ್ತದೆ. ಹೊಳೆ, ಹಳ್ಳ ತುಂಬಿ ಹರಿಯುತ್ತವೆ. ಗುಡುಗು ಘರ್ಜಿಸುತ್ತದೆ. ಸಿಡಿಲು ಬೀಳುತ್ತದೆ. ಮಿಂಚು ಫೋಟೊ ಹೊಡೆದಂತೆ ಮಿಂಚುತ್ತದೆ. ಮಹಾಪೂರ ಬರುತ್ತದೆ. ಜಲಪಾತಗಳು ರಭಸದಿಂದ ಧುಮುಕುತ್ತದೆ. ಮಳೆಗಾಲದ ನೀರುಂಡ ಗಿಡಮರಗಳು ಖುಷಿಯಲ್ಲಿ ತಲೆದೂಗುತ್ತವೆ. ಆಕಾಶದ ಮುಖ ಕಪ್ಪು ಮೋಡಗಳಿಂದ ಸಿಟ್ಟಿಗೆದ್ದ ಯಜಮಾನನಂತೆ ಕಪ್ಪಾಗಿರುತ್ತದೆ. ಸೂರ್ಯ ಕಾಣಿಸುವುದೇ ಇಲ್ಲ. ಆತ ಮೋಡಗಳ ಮರೆಯಲ್ಲಿ ಕಾಣೆಯಾಗಿರುತ್ತಾನೆ. ಸೂರ್ಯ ಆಗೊಮ್ಮೆ ಈಗೊಮ್ಮೆ ಕಣ್ಣು ತೆರೆಯುತ್ತಾನೆ.

ಚಳಿಗಾಲದಲ್ಲಿ ನಿಸರ್ಗ ನಿದ್ದೆ ಮಾಡುವಂತೆ ಕಾಣುತ್ತದೆ. ಕೆಲವು ಕಡೆ ಪ್ರಕೃತಿ ಮಂಜಿನ ಮುಸುಕು ಹೊದೆದು ಮಲಗಿರುತ್ತಾಳೆ. ಕೆಲವು ಗಿಡಗಳ ಎಲೆ ಉದುರಿ ಬೋಳಾಗಿರುತ್ತದೆ. ಚಳಿಗಾಲದ ಮುಂಜಾವಿನಲ್ಲಿ ಮಂಜು ಹನಿಗಳು ಮಳೆ

ಬೀಳುತ್ತಿದೆಯೇನೋ ಎಂಬಂತೆ ಬೀಳುತ್ತಿರುತ್ತವೆ. ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿಯ ಬ್ರಹ್ಮಗಿರಿಯನ್ನು ಏರಿ ಹೋಗಲು ದಾರಿ ಕಾಣುವುದಿಲ್ಲ. ಎಲ್ಲವೂ ಮಂಜಿನಮಯವಾಗಿರುತ್ತದೆ. ಬೇಸಿಗೆಯಲ್ಲಿ ನಿಸರ್ಗ ಇನ್ನೊಂದು ಬಗೆಯಾಗಿಯೇ ಕಾಣುತ್ತದೆ. ವಸಂತನನ್ನು ಬರಮಾಡಿಕೊಳ್ಳಲು ನಿಸರ್ಗದೇವಿ ಸಿಂಗಾರಗೊಂಡಿರುತ್ತಾಳೆ. ಮಾಮರ ಚಿಗುರುತ್ತದೆ. ಕೋಗಿಲೆಗಳು ಹಾಡುತ್ತವೆ. ಗಿಡಗಳು ಮರಗಳು ಬಹು ಬಗೆಯ ಹೂ ಹಣ್ಣು, ಕಾಯಿಗಳಿಂದ ಕಂಗೊಳಿಸುತ್ತವೆ. ಮಂದವಾಗಿ ಬೀಸುವ ಗಾಳಿ ಮುದ ನೀಡುತ್ತದೆ. ಬೇಸಿಗೆಯ ಬಿಸಿಲು ತೀವ್ರವಾಗಿರುತ್ತದೆ. ದಿನಕಳೆದಂತೆ ಸೆಖೆ ಹೆಚ್ಚಾಗುತ್ತದೆ. ನಿಸರ್ಗವು ಬಾಯಾರಿದಂತೆ ಕಾಣುತ್ತದೆ. ಆಗ ಮತ್ತೆ ಮಳೆಗಾಲ ಪ್ರಾರಂಭವಾಗುತ್ತದೆ. ಹೀಗೆ ಈ ಮೂರು ಕಾಲಗಳಲ್ಲಿ ನಿಸರ್ಗ ಬೇರೆ ಬೇರೆ ರೀತಿಯಲ್ಲಿಯೇ ಕಾಣುತ್ತದೆ.

ಕರಾವಳಿ ಕನ್ನಡನಾಡಿನ ಇನ್ನೂರು ಮೈಲಿನಷ್ಟು ಉದ್ದದ ಮನೋಹರವಾದ ಭೂಮಿಯ ಸೆರಗು. ಕರಾವಳಿಯ ಎತ್ತರದ ಜಾಗದಲ್ಲಿ ನಿಂತರೆ ಕಡಲ ದಂಡೆ ಹಾಗೂ ಸಾಗರದ ಸೊಗಸಾದ ನೋಟ ಕಾಣುತ್ತದೆ. ಒಂದು ಕೊಳವನ್ನೋ, ಸರೋವರವನ್ನೋ ನೋಡುವುದಕ್ಕೂ ಸಮುದ್ರವನ್ನು ನೋಡುವುದಕ್ಕೂ ಅಂತರವಿದೆ. ಎಷ್ಟು ದೂರ ಹೋದರೂ ಸಮುದ್ರ ಸಮತಟ್ಟಾಗಿ ಕಾಣುತ್ತದೆ. ಸಮುದ್ರದ ನೀರು ಆಕಾಶದ ನೀಲಿಯಂತೆ ನೀಲವಾಗಿರುತ್ತದೆ. ವಿಶಾಲ ಸಾಗರದ ಮೇಲೆ ಗಾಳಿ ಬೀಸುವಾಗ ನೀರಿನ ಅಲೆಗಳು ಏಳುತ್ತವೆ. ದೂರದಿಂದ ಗಾಳಿ ಬೀಸುವಾಗ ದೊಡ್ಡ ಅಲೆಗಳು ಉಂಟಾಗುತ್ತವೆ. ಗಾಳಿಯ ರಭಸ ಹೆಚ್ಚಿ, ಅದು ಬಿರುಗಾಳಿಯಾದರೆ ಸಮುದ್ರದಲ್ಲಿ ತುಫಾನು ಏಳುತ್ತದೆ. ಒಂದೊಂದು ಅಲೆ ಹತ್ತು ಇಪ್ಪತ್ತು ಅಡಿ ಎತ್ತರಕ್ಕೆ ಏರುತ್ತದೆ. ಈ ಅಲೆಗಳು ಕಡಲಿನ ದಂಡೆಗೆ ಅಪ್ಪಳಿಸಿ ತಮ್ಮ ಅಬ್ಬರವನ್ನು ಕಳೆದುಕೊಳ್ಳುತ್ತವೆ. ಕಡಲ ತಡಿಯಲ್ಲಿ ನಿಂತರೆ ಒಂದರ ಹಿಂದೆ ಒಂದರಂತೆ ತೆರೆಗಳು ನಮ್ಮತ್ತ ಧಾವಿಸಿ ಬರುತ್ತವೆ. ಇದರಲ್ಲಿ ಮುಂದಿನ ಅಲೆ ಕತ್ತಿಯ ಬಾಯಂತೆ ನಮ್ಮತ್ತ ಮಗುಚುತ್ತದೆ. ಈ ತೆರೆ ಮುರಿಯುವಾಗ ಉಂಟಾಗುವ ಬಿಳಿಯ ನೊರೆಗಳ ಪರಿಯೇ ಸೊಗಸು. ಅದು ಬೆಳ್ಳಗಿನ ಹೂಗಳನ್ನು ನೇಯ್ದು ಮಾಡಿದ ಹೂದಂಡೆಯಂತೆ ಕಾಣುತ್ತದೆ. ದಡಕ್ಕೆ ಬಂದ ನೀರು ಮುಂದುವರಿಯದೆ ಹಾಗೇ ಮರಳುತ್ತದೆ. ತುದಿ ಮೊದಲಿಲ್ಲದ ಅಲೆಗಳ ಈ ಆಟದಿಂದ ಕಡಲು ಸದಾ ಮೊರೆಯುತ್ತಿರುತ್ತದೆ.

ಕಡಲಿನ ತೆರೆ, ಮೊರೆ, ನೊರೆಗಳಿಗೆ ವಿರಾಮವೇ ಇಲ್ಲ. ಸಮುದ್ರದ ತಡಿಯಲ್ಲಿ ತೆರೆ ಬರುವಲ್ಲಿ ನಿಂತರೆ ಹೊಸ ಅನುಭವವಾಗುತ್ತದೆ. ಮರಳಿ ಹೋಗುವ ನೀರನ್ನು ನೋಡಿದರೆ ತಲೆತಿರುಗಿದಂತೆ ಆಗುತ್ತದೆ. ರಭಸದಿಂದ ಬಂದ ಅಲೆ ಉಸುಕನ್ನು ಕೊಚ್ಚಿಕೊಂಡು ಹೋಗುವಾಗ ಕಾಲು ತಪ್ಪುತ್ತದೆ. ಆಗ ತಳತಪ್ಪಿದ ಅನುಭವವಾಗುತ್ತದೆ. ಮಳೆಗಾಲದಲ್ಲಿ ಕಡಲ ಅಬ್ಬರ ಬಹಳ ದೂರ ಕೇಳಿಸುತ್ತದೆ. ಸಂಜೆ ಸಾಗರದ ತಡಿಯಲ್ಲಿ ಕುಳಿತು ಸೂರ್ಯನು ಮುಳುಗುವುದನ್ನು ನೋಡುವುದು ಒಂದು ಸುಂದರ ಅನುಭವ. ಕಿತ್ತಳೆಯ ಹಣ್ಣಿನ ಬಣ್ಣದಿಂದ ಸೂರ್ಯ ಕೊನೆಗೆ ಕೆಂಪಾಗುತ್ತಾನೆ. ಆತ ಸಾವಕಾಶವಾಗಿ ಸಮುದ್ರದಲ್ಲಿ ಕಾಣೆಯಾಗುತ್ತಾನೆ. ಸಮುದ್ರದಲ್ಲಿ ಒಂದು ಕೆಂಪಾದ ಮಡಿಕೆಯನ್ನು ಬೋರಲಾಗಿ ಇಟ್ಟಂತೆ ಸೂರ್ಯ ಕಾಣುತ್ತಾನೆ. ಕರಾವಳಿಯ ಬೈಂದೂರು, ಭಟ್ಕಳ, ಮುರ್ಡೇಶ್ವರ, ಕಾರವಾರ, ಗೋಕರ್ಣ ಮುಂತಾದ ಕಡೆಗಳಲ್ಲಿ ಗುಡ್ಡಗಳು ಕಡಲಿಗೆ ಚಾಚಿ ನಿಂತಿವೆ. ಅಲ್ಲಿ ಬಂಡೆಗಳು ಸಮುದ್ರಕ್ಕೆ ತಾಗಿಕೊಂಡಿರುತ್ತದೆ. ಆ ಬಂಡೆಗಳಿಗೆ ಬಂದು ಅಪ್ಪಳಿಸುವ ತೆರೆಗಳ ನೋಟ ಘನ ಗಂಭೀರ, ನೀರಿನ ಅಗಾಧ ಶಕ್ತಿಯ ಅರಿವು ಆಗ ನಮಗೆ ಆಗುತ್ತದೆ.

ಕರಾವಳಿಯ ಕಡಲ ಕಿನಾರೆಯ ಅಂಚನ್ನು ಬೇಲೆ ಎಂದು ಕರೆಯುತ್ತಾರೆ. ನೀರು ಹರಿದು ಹರಿದು ಅಲ್ಲಿ ಮರಳು ಒದ್ದೆಯಾಗಿ ಗಟ್ಟಿ ನೆಲದಂತೆ ಕಾಣುತ್ತದೆ. ಬೇಲೆಯಲ್ಲಿ ಓಡಾಡುವುದೇ ಒಂದು ಚೆಂದ. ಶಂಖ, ಕವಡೆ, ಕಡೆಗೋಲಿನಂತಹ ಗುಳ್ಳೆ, ಸಮುದ್ರ ನಾಲಿಗೆ, ವಿವಿಧ ಬಣ್ಣದ ಚಿಪ್ಪುಗಳು ಅಲ್ಲಿ ಸಿಗುತ್ತವೆ. ಈ ಬೇಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಗುಂಪಾಗಿ ಬಂದು ಕುಳಿತುಕೊಳ್ಳುವ ಕಡಲ ಕಾಗೆಗಳು ಕಡಲ ತೀರವನ್ನು ಇನ್ನೂ ಸುಂದರಗೊಳಿಸುತ್ತವೆ.

ಕಾರವಾರದ ಕಡಲ ತೀರ
ಆಹಾ ಎನಿತು ಸುಂದರ

ಎಂದು ಕವಿಯೊಬ್ಬರು ಹಾಡಿದ್ದಾರೆ. ಕಾರವಾರದ ಕಡಲ ಕಿನಾರೆ, ಸೋಮೇಶ್ವರದಲ್ಲಿ ಭೀಮಗಾತ್ರದ ಬಂಡೆಗೆ ಅಪ್ಪಳಿಸುವ ತೆರೆಗಳು ನೋಡಬೇಕಾದ

ಸ್ಥಳಗಳು. ಕುಂದಾಪುರ ತಾಲೂಕಿನ ಮರವಂತೆಯಲ್ಲಿ ನದಿ ಮತ್ತು ಸಮುದ್ರ ತುಂಬಾ ಹತ್ತಿರದಲ್ಲಿದೆ. ಅದೊಂದು ನಿಸರ್ಗದ ಸುಂದರ ತಾಣ. ಸಮುದ್ರದ ನಡುವಿನ ದ್ವೀಪಗಳು ಬಹಳ ಸುಂದರವಾಗಿವೆ. ಹೊನ್ನಾವರದ ಬಸವರಾಜದುರ್ಗ, ಭಟ್ಕಳದ ನೇತ್ರಾಣಿ ಗುಡ್ಡೆ, ಕಾರವಾರದ ದೇವಗಡ, ಅಂಬುದೀವ, ಕೂರ್ಮಗಡ, ಉಡುಪಿ, ಮಲ್ಪೆ ಸಮೀಪದ ಸೇಂಟ್‌ಮೇರಿ ಐಲೆಂಡ್ ಇವು ನೋಡತಕ್ಕ ದ್ವೀಪಗಳು. ಉತ್ತರ ಕನ್ನಡದ ಸಮುದ್ರದಲ್ಲಿ ಸಿಗುವ ಭೀಮಗಾತ್ರದ ಶಾರ್ಕ ಮೀನುಗಳನ್ನು ಮರೆಯುವ ಹಾಗಿಲ್ಲ. ಕಡಲಾಮೆ, ತಿಮಿಂಗಲ, ಹಂದಿ ಮೀನು, ತೊರ್ಕೆ ಮೀನು ಇವೆಲ್ಲ ಕಡಲಲ್ಲಿ ಕಾಣುವ ಜಲಚರಗಳು.

ಸದಾ ತುಂಬಿ ಹರಿಯುವ ಜೀವನದಿಗಳು ನಿಸರ್ಗದ ವರದಾನವಾಗಿದೆ. ಅಘನಾಶಿನಿ, ಗಂಗಾವಳಿ, ಶರಾವತಿ, ನೇತ್ರಾವತಿ, ಕಾಳಿ, ವರದಾ, ಕಾವೇರಿ, ತುಂಗಾಭದ್ರಾ, ಭೀಮಾ, ಕೃಷ್ಣ, ಮಲಪ್ರಭಾ ಹೀಗೆ ಹಲವಾರು ನದಿಗಳಿವೆ. ಎರಡು ನದಿಗಳು ಸೇರುವ ಜಾಗವನ್ನು ಸಂಗಮ ಎನ್ನುತ್ತಾರೆ. ಅಲ್ಲಿ ನದಿಯ ಪಾತ್ರ ವಿಸ್ತಾರವಾಗಿರುತ್ತದೆ. ವಿಶಾಲವಾದ ಪಾತ್ರದಲ್ಲಿ ನದಿ ತನ್ನ ವೇಗವನ್ನು ಕಡಿಮೆ ಮಾಡಿ ಮಂದವಾಗಿ ಹರಿಯುತ್ತದೆ. ಮಂದವಾದ ಗಾಳಿ ಬೀಸಿದಾಗ ಅಲ್ಲಿ ಏಳುವ ಸೌಮ್ಯ ಅಲೆಗಳದೇ ಒಂದು ರೀತಿಯ ಸೊಗಸು. ಮೈಸೂರು ಜಿಲ್ಲೆಯ ಕಪಿಲ ಕಾವೇರಿ ಸಂಗಮ, ಬಿಜಾಪುರ ಜಿಲ್ಲೆಯ ಕೂಡಲ ಸಂಗಮ, ಶಿವಮೊಗ್ಗ ಜಿಲ್ಲೆಯ ತುಂಗಭದ್ರಾ ಸಂಗಮ, ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ ಕುಮಾರದ್ವಾರ ಸಂಗಮ, ಮೇಕೆದಾಟು ಬಳಿಯ ಕಾವೇರಿ ಮತ್ತು ಶಿಂಷಾ ಸಂಗಮ, ಇವು ನೋಡತಕ್ಕ ನದಿಗಳ ಸಂಗಮ ಸ್ಥಾನಗಳಾಗಿವೆ.

ಗುಡ್ಡ, ಬೆಟ್ಟ, ಪರ್ವತಗಳು ನಿಸರ್ಗದ ಚೆಲುವಿನ ಕಿರೀಟಗಳು. ಮುಂಜಾನೆಯ ಸೂರ್ಯ ಕಿರಣಗಳು ಬೆಟ್ಟದ ಹಸಿರು ಹಣೆಗೆ ಬಂಗಾರದ ಭಸ್ಮ ಲೇಪಿಸಿದಂತೆ ಕಾಣುತ್ತವೆ. ಕೆಲವು ಕಡೆ ಗುಡ್ಡಗಳಲ್ಲಿ ಹಸಿರೇ ಇರುವುದಿಲ್ಲ. ಬಳ್ಳಾರಿ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಅನೇಕ ಗುಡ್ಡಬೆಟ್ಟಗಳು ಕಾಣಸಿಗುತ್ತವೆ. ಇತರ ಗುಡ್ಡಗಳಂತೆ ಇವು ಮಣ್ಣಿನ ರಾಶಿ ಅಲ್ಲ. ಅದಕ್ಕೆ ಹುಲ್ಲಿನ ಹೊದಿಕೆಯೂ ಇಲ್ಲ. ಹಂಪೆಯ ಭೀಮಗಾತ್ರದ ಬಂಡೆಗಳದೇ

ಒಂದು ಸೊಗಸು. ತಿಮಿಂಗಲ ಗಾತ್ರದ, ಆನೆಗಾತ್ರದ ಗುಡ್ಡೆ ಗಾತ್ರ ಬಂಡೆಗಳು ಇಲ್ಲಿವೆ. ಒಂದಕ್ಕೊಂದು ಹೊಂದಿಕೊಂಡಿರುವ ಅಕ್ಕತಂಗಿಯರ ಬಂಡೆ ಚೆನ್ನಾಗಿದೆ. ಇಲ್ಲಿಯ ಬಂಡೆಗಳ ಮೇಲೆ ಜೇನುತಟ್ಟೆಗಳಿವೆ. ಇಲ್ಲಿಯ ಗುಹೆಗಳಲ್ಲಿ ಕಪ್ಪು ಕರಡಿಗಳು ಕಾಣಿಸುತ್ತವೆ. ಇಲ್ಲಿ ಮುಳ್ಳು ಹಂದಿಯು ಮನೆ ಮಾಡಿಕೊಂಡಿರುತ್ತದೆ.

ಬಾದಾಮಿ, ಬನಶಂಕರಿ, ಗುಳೇದಗುಡ್ಡ, ಗೋಕಾಕಗಳ ಗುಡ್ಡೆಗಳ ಸೊಬಗೇ ಬೇರೆ ಬಗೆಯದು. ಇವು ಮರಳು ಕಲ್ಲಿನ ಗುಡ್ಡಗಳು. ಗೋಕಾಕ ಗುಡ್ಡೆಗಳ ಮಣ್ಣಿನ ಪದರು ಬೇರೆಬೇರೆಯಾಗಿ ಕಾಣುತ್ತದೆ. ಒಂದೊಂದು ಪದರಿನ ಬಣ್ಣವೂ ಬೇರೆಬೇರೆಯಾಗಿ ಇರುತ್ತದೆ. ಮಲೆನಾಡಿನ ಪಶ್ಚಿಮ ಘಟ್ಟಗಳ ಕಾಡು ಬೆಟ್ಟಗಳದೇ ಬೇರೊಂದು ರೀತಿ. ಹಸಿರು ಮುರಿಯುವ ಇಲ್ಲಿಯ ಕಾಡುಗಳನ್ನು ನೋಡುವುದೇ ಆನಂದ. ಇಲ್ಲಿ ಗಿಡಮರಗಳು ದಟ್ಟವಾಗಿ ತುಂಬಿಕೊಂಡಿರುತ್ತದೆ. ಕೆಲವು ಕಡೆ ಎಲೆಗಳ ಚಪ್ಪರದ ಅಡಿಯಲ್ಲಿ ಸೂರ್ಯನ ಬಿಸಿಲು ನುಸುಳಲಾರದು. ಕಾಡು ತನ್ನ ನಿಗೂಢತೆಯೊಂದಿಗೆ ಭಯವನ್ನು ಮೂಡಿಸುತ್ತದೆ. ದೊಡ್ಡ ದೊಡ್ಡ ಮರಗಳು ಮುಗಿಲನ್ನೇ ಮುದ್ದಿಸುವಂತೆ ಕಾಣುತ್ತದೆ. ಮರಕ್ಕೆ ಸುತ್ತಿಕೊಂಡ ಬಿಳಲುಗಳು ನಿರ್ಮಿಸಿದ ಉಯ್ಯಾಲೆಯಲ್ಲಿ ಕುಳಿತು ಬೀಕುವುದೇ ಒಂದು ಸೊಗಸು. ಮರದಲ್ಲಿ ಅರಳಿದ ವನಸುಮಗಳಿಗೆ ಹೊಸ ಬಗೆಯ ಕಂಪಿದೆ. ಕಾಳಿಂಗ, ಹೆಬ್ಬಾವು, ಸುರಗುಂದ, ದಾಸಹಾವು ಮುಂತಾದ ಹಾವುಗಳು ಭೀತಿ ಹುಟ್ಟಿಸುತ್ತವೆ. ಕೆಲವು ಹಾವುಗಳು ತರಗೆಲೆಗಳ ನಡುವೆ ಚಕ್ರದ ಆಕಾರದಲ್ಲಿ ತೆಕ್ಕೆ ಹಾಕಿ ಮಲಗಿರುತ್ತವೆ. ಕಾಡಿನಲ್ಲಿ ಒಮ್ಮೆ ಕಂಡು ಕೂಡಲೆ ಕಣ್ಮರೆಯಾಗುವ ಪ್ರಾಣಿಗಳನ್ನು ನೋಡುವುದೇ ಒಂದು ಅನುಭವ.

ಅಭಯಾರಣ್ಯಗಳಲ್ಲಿ ಭಯವಿಲ್ಲದೆ ಓಡಾಡುವ ಪ್ರಾಣಿಗಳು ಕಾಣಸಿಗುತ್ತವೆ. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಅರಣ್ಯ ಪ್ರದೇಶ, ಚಿಕ್ಕಮಗಳೂರು ಬಳಿಯ ಮುತ್ತೋಡಿ, ಕೊಡಗಿನ ನಾಗರಹೊಳೆ ಹಾಗೂ ಮೈಸೂರಿನ ಬಂಡೀಪುರ ಇಂತಹ ಅಡವಿಗಳಾಗಿವೆ. ಇಂತಹ ಅಡವಿಗಳಲ್ಲಿ ಒಂದೇ ಜಿಗಿತಕ್ಕೆ ಇಪ್ಪತ್ತು ಮುವತ್ತು ಅಡಿ ಓಡುವ ಜಿಂಕೆಗಳನ್ನು ಕಾಣಬಹುದು. ಗಂಡು ಜಿಂಕೆಗೆ ಕವಲು ಕೊಂಬಿರುತ್ತದೆ. ಹೆಣ್ಣು ಜಿಂಕೆಗೆ ಕೊಂಬು ಇರುವುದಿಲ್ಲ. ಜಿಂಕೆಯ ಕೆಂಚು ಮೈಮೇಲೆ ಮಿಂಚುವ ಬಿಳಿ ಚುಕ್ಕೆಗಳನ್ನು

ನೋಡಲು ಚೆಂದ. ಜಿಂಕೆಯ ಬೊಗಸೆ ಕಣ್ಣುಗಳು ಅಷ್ಟೇ ಅಂದ. ಕರ್ನಾಟಕದ ಕಾಡುಗಳಲ್ಲಿ ವಿಶೇಷವಾಗಿ ಆನೆಗಳು, ಹುಲಿ, ಚಿರತೆಗಳು ಕಾಣಸಿಗುತ್ತವೆ. ನಾಗರಹೊಳೆ, ಬಂಡೀಪುರ, ಕಾಕನಕೋಟೆಯ ಆನೆಗಳು, ಸಹ್ಯಾದ್ರಿಯ ಹುಲಿ, ಚಿರತೆ, ಕಾಡುಕೋಣಗಳು ಗಮನ ಸೆಳೆಯುತ್ತವೆ. ಕಿಷ್ಕಿಂಧ ಎಂದು ಪ್ರಸಿದ್ಧವಾದ ಹಂಪೆಯ ಸುತ್ತಮುತ್ತಲಿನ ಮುಸಿಯ ಕಪಿಗಳದು ಒಂದು ವಿಶೇಷ. ರಾಣೆಬೆನ್ನೂರಿನ ಕೃಷ್ಣ ಮೃಗಗಳು ಅಪರೂಪದ ವನ್ಯಜೀವಿಗಳು. ಬಯಲುಸೀಮೆಯ ಕುರುಚಲು ಕಾಡಿನಲ್ಲಿ ಮಲೆನಾಡಿನಲ್ಲಿ ಕಾಣುವ ನವಿಲು ಸುಂದರವಾದ ಪಕ್ಷಿ. ಅರ್ಧ ತೋಳನಂತಿರುವ ಕಿರುಬ ಎಂಬ ಪ್ರಾಣಿ ಕೆಲವು ವರ್ಷದ ಹಿಂದೆ ಕನ್ನಡನಾಡಿನ ಹಳ್ಳಿಗಾಡುಗಳಲ್ಲಿ ಬದುಕಿತ್ತು. ಈಗ ಅದರ ಸಂತತಿ ಕಡಿಮೆಯಾಗಿದೆ. ಇದನ್ನು ಕತ್ತೆ ಕಿರುಬ, ಕುರ್ತ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಹಾರು ಬೆಕ್ಕು, ಕಬ್ಬೆಕ್ಕು, ಪುನುಗಾನ ಬೆಕ್ಕು, ಹುಲಿ ಬೆಕ್ಕು ಎಂಬ ಬೆಕ್ಕಿನ ಜಾತಿಯ ಪ್ರಾಣಿಗಳು ಕಾಡಿನಲ್ಲಿವೆ. ಸೀಳು ನಾಯಿ ಎಂಬ ನಾಯಿ ಜಾತಿಯ ಪ್ರಾಣಿ ಇದೆ. ಅದನ್ನು ಕೆನ್ನಾಯಿ ಎಂದು ಕರೆಯುತ್ತಾರೆ. ಇವು ಒಗ್ಗಟ್ಟಿನಿಂದ ಬೇಟೆಯಾಡುತ್ತವೆ. ಗೇರುಸೊಪ್ಪೆಯ ಅರಣ್ಯದಲ್ಲಿ ವನಮನಸ ಎಂಬ ಮನುಷ್ಯನ ಆಕಾರದ ಚಿಕ್ಕ ಪ್ರಾಣಿ ಇದೆ. ಈಗ ಅದರ ಸಂಖ್ಯೆ ಕಡಿಮೆಯಾದೆ. ಕಾಣಲು ಸಿಗುತ್ತಿಲ್ಲ. ಮನುಷ್ಯ ಎಂಬ ಪ್ರಾಣಿ ಇಂದು ಈ ಪ್ರಾಣಿಗಳನ್ನು ಮಾಂಸಕ್ಕಾಗಿ, ಚರ್ಮಕ್ಕಾಗಿ ಕೊಲ್ಲುತ್ತಿದ್ದಾನೆ. ಆತ ತನ್ನ ಸ್ವಂತಕ್ಕಾಗಿ ಕಾಡನ್ನು ನಾಶಮಾಡುತ್ತಿದ್ದಾನೆ. ಆದರಿಂದ ಕಾಡು ಪ್ರಾಣಿಗಳು ಇಲ್ಲವಾಗುತ್ತಿವೆ. ಪಶ್ಚಿಮ ಘಟ್ಟಗಳು ನಿಸರ್ಗ ಪ್ರಿಯರನ್ನು ಕೈಮಾಡಿ ಕರೆಯುತ್ತವೆ. ಅಲ್ಲಿಯ ಎತ್ತರದ ಮರಗಳು ಕಡಿದಾದ ಕೊಳ್ಳಗಳು, ಆಳವಾದ ಪ್ರಪಾತಗಳು ರಮಣೀಯವಾಗಿವೆ. ಈ ಘಟ್ಟಗಳಲ್ಲಿ ಹಾವಿನಂತೆ ಅಂಕುಡೊಂಕಾಗಿ ಹರಿಯುತ್ತಾ ಹೋದ ರಸ್ತೆಗಳಲ್ಲಿ ಪಯಣ ಮಾಡುವುದೇ ಒಂದು ಮೋಜು. ಶಿರಾಡಿ, ಚಾರ್ಮಾಡಿ, ನಾಗೋಡಿ, ಆಗುಂಬೆ, ಅರಬೈಲು, ಗೇರುಸೊಪ್ಪೆಯ ಮಲೆಮನೆ, ಸಿರಸಿಯ ದೇವಿಮನೆ ಘಟ್ಟಗಳು ಪ್ರಸಿದ್ಧವಾದ ಘಟ್ಟಗಳಾಗಿವೆ. ಗೇರುಸೊಪ್ಪೆಯ ಸಮೀಪದ ಹೋರಿರ್ಝರಿ ನೋಡಲು ಸುಂದರವಾಗಿದೆ. ಕುಂದಾಪುರ ತಾಲೂಕಿನ ಬೈಂದೂರು ಹತ್ತಿರ ವತ್ತಿನ ಆಣೆಘಟ್ಟವು ಸುಂದರವಾದ ದೃಶ್ಯಕ್ಕೆ ಹೆಸರಾಗಿದೆ.

ಬಾಬಾಬುಡನಗಿರಿ ಬೆಟ್ಟ. ಅಪಾರ ಹೂವು, ಬಳ್ಳಿ, ಕಳ್ಳಿಗಳಿಂದ ತುಂಬಿದೆ. ಸಿದ್ಧರ ಬೆಟ್ಟ ಗಿಡಮೂಲಿಕೆ ಔಷಧಿಗೆ ಹೆಸರಾಗಿದೆ. ಕರಿಕಾನಮ್ಮನ ಗುಡ್ಡ, ಕೊಡಚಾದ್ರಿ, ಕುದುರೆಮುಖ, ಮುಳ್ಳಯ್ಯನಗಿರಿ, ಮೇಘಾನೆ, ಸುಬ್ರಹ್ಮಣ್ಯ, ನಂದಿಬೆಟ್ಟ ಇವು ಉತ್ತಮ ಗಿರಿಧಾಮಗಳಾಗಿವೆ.

ಶಿವಗಂಗೆ ಬೆಟ್ಟ, ಸಾವನದುರ್ಗ, ಬಿಳಿಗಿರಿ ರಂಗನ ಬೆಟ್ಟ, ಮಹದೇಶ್ವರ ಬೆಟ್ಟ, ಚಾಮುಂಡಿ ಬೆಟ್ಟ, ಕೊಂತಿ ಬೆಟ್ಟ, ಶ್ರವಣಬೆಳ್ಗೊಳ, ಬ್ರಹ್ಮಗಿರಿ ಮುಂತಾದ ಬೆಟ್ಟಗಳು ಪುರಾಣ ಪ್ರಸಿದ್ಧವಾಗಿವೆ. ಬಹುಸಂಖ್ಯೆಯಲ್ಲಿ ಭಕ್ತರು ಪೂಜೆ ಮಾಡಲು ಹರಕೆ ಸಲ್ಲಿಸಲು ಈ ಬೆಟ್ಟಗಳಿಗೆ ಹೋಗುತ್ತಾರೆ.

ನಿಸರ್ಗದ ಚೆಲುವನ್ನು ಸಾರಿ ಹೇಳುವ ಕಾಡು ಕಾಣೆಯಾಗುತ್ತಿದೆ. ಉರುವಲಕ್ಕಾಗಿ, ಪೀಠೋಪಕರಣಗಳಿಗಾಗಿ ಕಾಡನ್ನು ಕಡಿಯುತ್ತಿದ್ದಾರೆ. ಲಾವಂಚದ ಎಣ್ಣೆ ಮಾಡುವ ದಣಿಗಳು, ಭಟ್ಟಿ ತೆಗೆಯಲು ಕಾಡಿನ ಮರವನ್ನು ಸುಡುತ್ತಿದ್ದಾರೆ. ಗೋಮಾಳಗಳು ಇಲ್ಲವಾಗುತ್ತಿವೆ. ಇದರಿಂದ ಪರಿಸರದ ಸಮತೋಲ ತಪ್ಪಿದೆ. ಮಳೆ ಸರಿಯಾಗಿ ಬೀಳುತ್ತಿಲ್ಲ. ಒಂದು ಕಡೆ ಜೋರು ಮಳೆಯಾಗಿ ಭೂಮಿ ಕೊರೆದು ಹೋಗುತ್ತದೆ. ಇನ್ನೊಂದು ಕಡೆ ಮಳೆಯೇ ಇಲ್ಲದೆ ಜನ ಊರು ಬಿಡಬೇಕಾಗಿದೆ. ಕಾಡಿನ ನಾಶದಿಂದ ಪರಿಸರದ ನಾಶದಿಂದ ಹೀಗಾಗಿದೆ.

ನಿಸರ್ಗ ಎಲ್ಲೆಡೆಯಲ್ಲಿಯೂ ಚೆಲುವನ್ನು ತೆರೆದು ತೋರಿದೆ. ಮಂಡ್ಯ ಜಿಲ್ಲೆಯ ರಂಗನತಿಟ್ಟು, ಕೊಕ್ಕರೆ ಬೆಳ್ಳೂರಿನ ಪಕ್ಷಿಧಾಮ, ಶಿವಮೊಗ್ಗಾ ಜಿಲ್ಲೆಯ ಮಂಡಗದ್ದೆ ಪಕ್ಷಿಧಾಮ, ಬಗೆಬಗೆಯ ಪಕ್ಷಿಗಳ ಕಾಶಿಯೇ ಆಗಿದೆ. ಶೃಂಗೇರಿಯ ತುಂಗಾ ದಡದ ಮೀನುಗಳು ಕಣ್ಣು ಮನವನ್ನು ಸೆಳೆಯುತ್ತವೆ. ಬೆಂಗಳೂರು ಹತ್ತಿರ ಹಲವಾರು ಎಕರೆ ಜಾಗ ಆವರಿಸುವ ದೊಡ್ಡಾಲದ ಮರ ನಿಸರ್ಗದ ಇನ್ನೊಂದು ಕೊಡುಗೆ. ಚಿತ್ರದುರ್ಗದ ಮಾರಿ ಕಣಿವೆಯ ಸರೋವರ, ಬಳ್ಳಾರಿ ಜಿಲ್ಲೆಯ ಸೊಂಡೂರು ಬಳಿಯ ದೋಣಿಮಲ್ಲೈ ಸರೋವರ ನಿಸರ್ಗ ನಿರ್ಮಿಸಿದ ಜಲಕನ್ನಡಿಗಳಂತೆ ಇವೆ. ತುಮಕೂರಿನ ಮದಲಿಂಗನ



ಕಾರ್ಖಾನೆಗಳು ರಾಸಾಯನಿಕ ನೀರನ್ನು
ಹಾಗೂ ಹೊಗೆಯನ್ನು ಹೊರಚೆಲ್ಲುವುದು

ಕಣಿವೆಯು ಸುಂದರ. ದಾಂಡೇಲಿಯ ಸೈಕ್ಸ್ ಪಾಯಿಂಟಿನಲ್ಲಿ ನಿಂತು ನೋಡಿದರೆ ಭೂಮಿ ಸ್ವರ್ಗದಂತೆ ಕಾಣುತ್ತದೆ. ಆ ಸನ್ನಿವೇಶವನ್ನು ನೋಡಿಯೇ ಅನುಭವಿಸಬೇಕು. ಬೆಂಗಳೂರು ರಾಮನಗರಧ ನಡುವಿರುವ ಕರಿಕಲ್ಲಿನ ಶಿಲೆಗಳು ಮನ ಸೆಳೆಯುತ್ತವೆ. ಯಾಣದ ಭೈರವೇಶ್ವರ ಗುಡ್ಡದ ಶಿಖರ ಅತಿ ಸುಂದರವಾಗಿದೆ. ಕಾವೇರಿ ನದಿ ಮೇಕೆದಾಟುವಿನ ಹತ್ತಿರ ಶಿಲೆಯನ್ನು ಕೊರೆದು ನಿರ್ಮಿಸಿದ ಚಿತ್ರ ಚೆಂದವಾಗಿದೆ.

ನಿಸರ್ಗ ನಮಗೆ ಹೆಚ್ಚಿನದನ್ನು ಕೊಟ್ಟಿದೆ. ನಿಸರ್ಗದ ಮಡಿಲ ಮಗು ಮಾನವ. ಆದರೆ ಈ ಮಾನವ ಈಗ ದಾನವನಾಗುತ್ತಿದ್ದಾನೆ. ದೊಡ್ಡ ದೊಡ್ಡ ಕಾರ್ಖಾನೆಗಳು ಹೊರಚೆಲ್ಲುವ ರಾಸಾಯನಿಕಗಳು ನದಿಯ ನೀರನ್ನು, ಸಮುದ್ರದ ನೀರನ್ನು ಕೆಡಿಸಿದೆ. ಇದರಿಂದ ಮೀನು ಸಾಯುತ್ತಿದೆ. ನೀರು ಕೆಡುತ್ತಿದೆ. ಕಾರ್ಖಾನೆಗಳ ಹೊಗೆ ಕೊಳವೆಗಳು ವಾತಾವರಣವನ್ನು ಹಾಳು ಮಾಡಿವೆ. ಮರಗಳು ನಾಶವಾಗಿ ಗುಡ್ಡಬೆಟ್ಟಗಳು ಬೋಳಾಗುತ್ತಿವೆ. ನಿಸರ್ಗದ ವಿಷಯದಲ್ಲಿ ಮಾನವ ಭಸ್ಮಾಸುರನಾಗಿದ್ದಾನೆ. ವರವಾಗಿ ಪಡೆದ ಉರಿಹಸ್ತವನ್ನು ಆತ ತನ್ನ ತಲೆಯ ಮೇಲಿಟ್ಟುಕೊಂಡು ನಾಶವಾದ. ಹಾಗೆ ಮಾನವ ಪರಿಸರದ ನಾಶದೊಂದಿಗೆ ತಾನೂ ನಾಶವಾಗುತ್ತಿದ್ದಾನೆ. ಉಸಿರಾಡುವ ಗಾಳಿ, ಕುಡಿಯುವ ನೀರು, ಉಣ್ಣುವ ಅನ್ನ ಎಲ್ಲಾ ವಿಷಮಯವಾಗುತ್ತಿದೆ. ನಿಸರ್ಗವನ್ನು ಹಾಳು ಮಾಡದೆ ಅದನ್ನು ಬೆಳೆಸಬೇಕು. ನಿಸರ್ಗ ನಮಗೆ ಬದುಕಲು ಕೊಟ್ಟಿದೆ. ನಾವು ನಿಸರ್ಗವನ್ನು ಉಳಿಸಬೇಕು.

ಜಲಪಾತಗಳು

ನಿಸರ್ಗದ ಚೆಲುವು ಹೆಚ್ಚುವಲ್ಲಿ ಜಲಪಾತಗಳು ಮಹತ್ವದ ಪಾತ್ರ ವಹಿಸಿವೆ. ಎತ್ತರದಿಂದ ನೆಲಕ್ಕೆ ಧುಮುಕುವ ಜಲಪಾತವನ್ನು ನೋಡುವುದೇ ಚೆಂದ. ಇದನ್ನು ಧಬಧಬೆ, ತಡಸಲು, ಫಾಲ್ಸ್ ಎಂದು ಕರೆಯುತ್ತಾರೆ. ನೀರು ವೇಗವಾಗಿ ರಭಸವಾಗಿ ಎತ್ತರದಿಂದ ಕೆಳಗೆ ಜಿಗಿಯುತ್ತದೆ. ಆಗ ಜಲಪಾತವಾಗುತ್ತದೆ. ನದಿಯ ಪಾತ್ರ ಬಹಳ ಕಡಿದಾಗಿದ್ದು ಆಳವಾಗಿರುವ ಕಡೆಯ ನೀರಿನ ಧುಮುಕುವಿಕೆಯನ್ನು ಜಲಪಾತ ಎಂದು ಕರೆಯುತ್ತಾರೆ. ಗುಡ್ಡ ಅಥವಾ ಬರೆಯ ಅಂಚು ಬಹಳ ಇಕ್ಕಟ್ಟಾಗಿರಬಹುದು. ಆಗ ನೀರು ಅತಿ ರಭಸದಿಂದ ಬೀಳುವಾಗ ನೆಲದ ಸಂಪರ್ಕ ಇರುವುದಿಲ್ಲ. ನೀರು ಆಗ ಹಲವಾರು ಅಡಿ ಆಳದ ತಳಕ್ಕೆ ಬೀಳಬಹುದು. ಆಗ ಜಲಪಾತವಾಗುತ್ತದೆ. ಗುಡ್ಡ ಕಡಿದಾಗಿ ಇರದಿದ್ದರೆ ನೀರು ಗುಡ್ಡದ ಮೈಗೆ ಹತ್ತಿಕೊಂಡು ಕೆಳಕ್ಕೆ ಧುಮುಕುತ್ತದೆ. ಆಗಲೂ ಜಲಪಾತವಾಗುತ್ತದೆ.

ಒಂದು ನದಿ ಉಗಮವಾಗಿ ಅದು ಸಮುದ್ರ ಸೇರುವವರೆಗಿನ ಮಾರ್ಗವನ್ನು ಮೂರು ವಿಧವಾಗಿ ವಿಂಗಡಿಸಬಹುದು. ಮೇಲುಕಣಿವೆ ಅಥವಾ ಪರ್ವತ ಭಾಗ, ನಡುಕಣಿವೆ ಅಥವಾ ಮಧ್ಯ ಭಾಗ ಮತ್ತು ಕೆಳಭಾಗ ಅಥವಾ ಬಯಲು. ಇವೇ ಆ ಮೂರು ವಿಭಾಗಗಳು. ನದಿ ಹರಿಯುವಾಗಿನ ಕೊರೆಯುವಿಕೆ, ನದಿಯ ಸ್ಥಾನ ಬದಲಾವಣೆ, ಹಾಗೂ ಮಣ್ಣಿನ ಲಕ್ಷಣಗಳನ್ನು ಅನುಸರಿಸಿ ಆಗುತ್ತದೆ. ನದಿಯ ಮೇಲುಕಣಿವೆ ಎತ್ತರವಾದ ಪರ್ವತದಲ್ಲಿ ಇರುತ್ತದೆ. ಇಂತಹ ಕಡೆಯಲ್ಲಿ ಸಹಜವಾಗಿ ಕಡಿದಾದ ಇಳಿಜಾರು ಇರುತ್ತದೆ. ಇಲ್ಲಿ ನದಿ ಅತಿ ವೇಗವಾಗಿ ಹರಿಯುತ್ತದೆ. ಆದ್ದರಿಂದ ನದಿಯ ಪಾತ್ರ ಕಿರಿದಾಗಿ ಕೊರೆಯುವಿಕೆ ಹೆಚ್ಚಾಗುತ್ತದೆ. ಈ ಕೊರೆಯುವಿಕೆ ನೀರಿನ ಪ್ರಮಾಣ, ಶಿಲೆಯ ಲಕ್ಷಣ ಮತ್ತು ನದಿಯ ಎತ್ತರವನ್ನು ಅವಲಂಬಿಸಿದೆ. ನದಿಯ ಪ್ರವಾಹ ಮಾರ್ಗದಲ್ಲಿನ ಶಿಲೆಯ ಪದರುಗಳು ಮೆದುವಾಗಿರಬಹುದು ಇಲ್ಲವೇ ಕಠಿಣವಾಗಿರಬಹುದು.


ಕಠಿಣ ಶಿಲೆಗಳು ಬೇಗ ಕೊರೆಯುವಿಕೆಗೆ ಒಳಗಾಗುವುದಿಲ್ಲ. ಆದರೆ ಮೆದು ಶಿಲೆಗಳು ಬೇಗ ಶಿಥಿಲವಾಗುತ್ತವೆ. ಆಗ ಕಡಿದಾದ ಇಳುಕಲು ಉಂಟಾಗುತ್ತದೆ. ಮತ್ತು ಮೇಲಿನ ಕಠಿಣ ಶಿಲೆಯ ಅಡಿಯಲ್ಲಿ ಒಂದು ಹಳ್ಳ ನಿರ್ಮಾಣವಾಗುತ್ತದೆ. ಕೊರೆತ ಹೆಚ್ಚಾದಂತೆ ಕಠಿಣ ಶಿಲಾಮುಖ ಲಂಬವಾಗಿ ನಿಂತಂತೆ ಕಾಣುತ್ತದೆ. ಆಗ ನದಿಯ ನೀರು ಹರಿಯುತ್ತಾ ಒಮ್ಮೆಲೇ ಕೆಳಕ್ಕೆ ಹಾರಿ ಬೀಳುತ್ತದೆ. ಇದನ್ನೇ ಜಲಪಾತ ಎಂದು ಕರೆಯುತ್ತಾರೆ. ಮೇಲಿನ ಕಠಿಣ ಶಿಲೆಗೆ ಜಲಪಾತಕಾರಿ ಎನ್ನುತ್ತಾರೆ. ಎಷ್ಟೋ ಕಾಲದ ಬಳಿಕ ಮೇಲಿನ ಕಠಿಣ ಶಿಲೆ ಶಿಥಿಲವಾದಂತೆ ಜಲಪಾತವು ಸಣ್ಣದಾಗುವ ಸಾಧ್ಯತೆಯಿದೆ. ಪ್ರಪಂಚದ ಅನೇಕ ಜಲಪಾತಗಳಲ್ಲಿ ಉತ್ತರ ಅಮೆರಿಕಾದ ನಯಾಗಾರಾ ಜಲಪಾತ ಬಲು ಪ್ರಸಿದ್ಧವಾಗಿದೆ. ಇದು ನೂರು ಮೈಲು ಉದ್ದದ ನಯಾಗರಾ ನದಿಯಿಂದ ಉಂಟಾಗಿದೆ. ಜಲಪಾತದ ಇನ್ನೊಂದು ತುದಿ ಕೆನಡಾಕ್ಕೆ ಸೇರುತ್ತದೆ. ಕೆನಡಾ ಭಾಗದ ಜಲಪಾತದ ಆಕಾರ ದೊಡ್ಡ ಲಾಳದಂತೆ ಇದೆ. ನಯಾಗಾರಾ ಜಲಪಾತ ವರ್ಷಕ್ಕೆ ಮೂರು-ನಾಲ್ಕು ಅಡಿ ಹಿಮ್ಮೆಟ್ಟುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಜಲಪಾತಗಳು ಶಾಶ್ವತವಲ್ಲ ಎಂಬುದಕ್ಕೆ ಇದೊಂದು ಉದಾಹರಣೆ.

ಭೋರ್ಗರೆವ ಜಲಪಾತವನ್ನು ಕಂಡಾಗ ಅದ್ಭುತವೇ ನೀರಿನ ರೂಪತಾಳಿ ಧುಮುಕುವ ಅನುಭವವಾಗುತ್ತದೆ. ಈ ಜಲಪಾತಗಳು ಹಲವಾರು ಅಡಿ ಆಳದಿಂದ ಸಾವಿರಾರು ಅಡಿ ಆಳದವರೆಗೆ ಧುಮುಕುತ್ತವೆ. ಈ ಜಲಪಾತಗಳ ಅಬ್ಬರ, ರೀವಿ, ನೀರಿನ ತುಂತುರು ಹನಿಗಳಿಂದಾಗುವ ಬಣ್ಣಬಣ್ಣದ ಕಾಮನಬಿಲ್ಲು ನೋಡಲು ಸುಂದರ. ಜಲಪಾತದ ಸುತ್ತುಮುತ್ತಲಿನ ನಿಸರ್ಗವೂ ಸುಂದರವಾಗಿರುತ್ತದೆ. ಜಲಪಾತದ ಸದ್ದು ಒಂದು ಬಗೆಯ ನಿರಂತರ ಸಂಗೀತವನ್ನುಂಟುಮಾಡಿದೆ. ಜಲಪಾತ ನೋಡುಗರ ಕಣ್ಣು ತುಂಬುತ್ತದೆ. ಕೇಳುಗರ ಕಿವಿಯನ್ನು ಭೋರ್ಗರೆವ ಸಂಗೀತದಿಂದ ತುಂಬುತ್ತದೆ. ಜಲಪಾತ ನೋಡಿ ಕಣ್ಣು ತುಂಬಿದ ಮೇಲೆ ಮತ್ತೇನೂ ನೋಡಬೇಕೆನಿಸುವುದಿಲ್ಲ. ಅದರ ಸಂಗೀತವನ್ನು ಕೇಳಿ ಕಿವಿ ತುಂಬಿದ ಮೇಲೆ ಇನ್ನೇನನ್ನೂ ಕೇಳುವ ಆಸಕ್ತಿ ಇರುವುದಿಲ್ಲ.

ಜಲಪಾತವನ್ನು ಬಣ್ಣಿಸುವುದು ಸುಲಭವಲ್ಲ. ಅದನ್ನು ಮೌನವಾಗಿ ಅನುಭವಿಸುವುದೇ ಒಂದು ಬಗೆಯ ಸುಖ. ಮಾನವ ಇದನ್ನು ಕೇವಲ ಕಂಡು ತಣಿಯುವುದಿಲ್ಲ. ಆತ ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂದು ಯೋಚಿಸುತ್ತಾನೆ. ಈ ಚಿಂತನೆಯ ಪರಿಣಾಮವಾಗಿ ಆತ ಜಲಪಾತದಿಂದ ಬಹು ಉಪಯೋಗಿಯಾದ ವಿದ್ಯುತ್ತನ್ನು ಪಡೆದಿದ್ದಾನೆ. ಆದ್ದರಿಂದ ಪ್ರಸಿದ್ಧ ಜಲಪಾತಗಳ ಹತ್ತಿರ ವಿದ್ಯುತ್ ಶಕ್ತಿ ಕೇಂದ್ರಗಳು ಇವೆ. ಒಂದೊಂದು ಜಲಪಾತಕ್ಕೆ

ಒಂದೊಂದು ರೀತಿಯ ಸೊಗಸು. ನಮ್ಮ ಜನ ಪುಣ್ಯಗಳಿಸಲು ಬೇರೆ ಬೇರೆ ಕಡೆಗೆ ಯಾತ್ರೆಗೆ ಹೋಗುತ್ತಾರೆ. ಅವರು ಕಣ್ಣು ಮನಸ್ಸಿನ ಆನಂದಕ್ಕಾಗಿ ಜಲಪಾತವನ್ನು ನೋಡುವ ಯಾತ್ರೆ ಮಾಡುವ ಸಂಕಲ್ಪ ಮಾಡಬೇಕು. ಇಂತಹ ಯಾತ್ರೆ ಉಪಯುಕ್ತವೂ ಆನಂದದಾಯಕವೂ ಆಗಿರುತ್ತದೆ. ಜಲಪಾತ ಜಗತ್ತಿನ ನಿಸರ್ಗ ಪ್ರೇಮಿಗಳನ್ನು ತನ್ನ ಕಡೆ ಕೈಬೀಸಿ ಕರೆಯುತ್ತದೆ.

ನಯಾಗಾರಾ ಜಲಪಾತ: ಇದು ಉತ್ತರ ಅಮೆರಿಕಾದ ವಿಶಾಲವಾದ ಜಲಪಾತ. ಜಗತ್ತಿನ ನಿಸರ್ಗ ಪ್ರಿಯರನ್ನು ಈ ಜಲಪಾತ ತನ್ನ ಕಡೆ ಸೆಳೆದಿದೆ. ಇದು ಕೆನಡಾ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದ ಗಡಿಯಲ್ಲಿ ಇದೆ. ನಡುವಿರುವ ದ್ವೀಪ ಈ ಜಲಪಾತವನ್ನು ಕೆನಡಾ ಮತ್ತು ಅಮೆರಿಕಾದ ವಿಭಾಗವನ್ನಾಗಿ ವಿಂಗಡಿಸಿದೆ. ಈ ಜಲಪಾತದ ಅಗಾಧ



ನಯಾಗಾರ ಜಲಪಾತ

ಜಲಶಕ್ತಿಯನ್ನು ಅಮೆರಿಕಾ ಮತ್ತು ಕೆನಡಾ ರಾಷ್ಟ್ರಗಳು ಜಲವಿದ್ಯುತ್ ಉತ್ಪಾದನೆಗೆ ಬಳಸಿಕೊಂಡಿವೆ. ಸೇಂಟ್‌ಲಾರೆನ್ಸ್ ಸಮುದ್ರ ಮಾರ್ಗದಿಂದಲೂ ಈ ಜಲಪಾತದಿಂದ ಇಳಿಯುವ ನೀರಿನ ಗಾತ್ರ ಕುಗ್ಗುತ್ತಿದೆ. ಅಮೇರಿಕಾ ವಿಭಾಗದವರು ಕಾಮನಬಿಲ್ಲು ಸೇತುವೆಯನ್ನು ರಚಿಸಿ ಈ ಜಲಪಾತದ ಸೌಂದರ್ಯವನ್ನು ಹೆಚ್ಚಿಸಿದ್ದಾರೆ.

ವಿಕ್ಟೋರಿಯಾ ಜಲಪಾತ: ಆಫ್ರಿಕಾ ಖಂಡದ ಭವ್ಯವಾದ ಜಲಪಾತ ಇದಾಗಿದೆ. ಉತ್ತರ ಮತ್ತು ದಕ್ಷಿಣ ರೊಡೀಶಿಯಾಗಳ ಗಡಿಯಾಗಿ ಹರಿಯುವ ಜಾಂಬಿನೆ ನದಿಯ ಮೇಲೆ ಈ ಜಲಪಾತವಿದೆ. ಈ ಜಲಪಾತ ಒಂದು ಮೈಲು ಅಗಲ ಹಾಗೂ ೩೪೦ ಅಡಿ ಎತ್ತರವಿದೆ. ಈ ಜಲಪಾತವನ್ನು ಆಫ್ರಿಕಾ ಖಂಡದ ಶೋಧಕರಲ್ಲಿ ಒಬ್ಬನಾದ ಲಿವಿಂಗಸ್ಟನ್ ಕಂಡು ಹಿಡಿದ. ಈ ಜಲಪಾತದಲ್ಲಿ ನಾಲ್ಕು ವಿಭಾಗವಿದೆ. ಒಂದು ಭಾಗಕ್ಕೆ ಇಂದ್ರಚಾಪ ಎಂಬ ಹೆಸರಿದೆ. ಈ ಜಲಪಾತದ ನೀರಿನ ಭೋರ್ಗರೆವ ಸದ್ದು ಅದ್ಭುತವಾಗಿದೆ. ನೀರು ಅಪ್ಪಳಿಸುವಾಗ ಮೇಲೇಳುವ ತುಷಾರದ ರಾಶಿ ಮೂವತ್ತು ಮೈಲಿವರೆಗೆ ಗೋಚರಿಸುತ್ತದೆಯಂತೆ. ಮಳೆಗಾಲದಲ್ಲಿ ಈ ತುಷಾರ ಸಮೂಹ ಎಲ್ಲೆಡೆ ಆವರಿಸುತ್ತದೆ. ಆದ್ದರಿಂದ ಜಲಪಾತ ಕಾಣದಂತೆ ಮುಚ್ಚಿ ಹೋಗುತ್ತದೆ. ಒಂದು ಮೈಲು ವಿಸ್ತಾರದಲ್ಲಿ ಕೆಳಗೆ ಧುಮುಕುವ ಈ ಜಲರಾಶಿ ಮುಂದೆ. ನೂರು ಅಡಿ ಅಗಲದ ಹೊಳೆಯಲ್ಲಿ ಹರಿದುಹೋಗುತ್ತದೆ. ಇದೊಂದು ವಿಶೇಷವೇ ಆಗಿದೆ.

ಏಂಜಲ್ ಜಲಪಾತ: ಇದು ಪ್ರಪಂಚದಲ್ಲಿಯೇ ಅತಿ ಎತ್ತರವಾದ ಜಲಪಾತವಾಗಿದೆ. ದಕ್ಷಿಣ ಭಾರತದ ಆಗ್ನೇಯ ಭಾಗದಲ್ಲಿರುವ ವೆನೀಜ್ವೇಲದ ಜಲಪಾತ ಇದಾಗಿದೆ. ಇದು ೩೨೧೨ ಅಡಿ ಎತ್ತರದಿಂದ ಧುಮುಕುತ್ತದೆ. ಇದು ಸರಾಗವಾಗಿ ಧುಮುಕುವ ಜಲಪಾತವಾಗಿದೆ. ತನ್ನ ಎತ್ತರದಿಂದ ನಯನ ಮನೋಹರವಾಗಿರುವ ಈ ಜಲಪಾತ ಮನಸೂರೆಗೈಯುವಂತೆ ನರ್ತಿಸುವ ರೀತಿಯೇ ಅತ್ಯಂತ ಸೊಗಸಾಗಿದೆ.

ಜೋಗ ಜಲಪಾತ : ಏಷಿಯಾ ಖಂಡದಲ್ಲಿಯೇ ಅತಿ ದೊಡ್ಡ ಜಲಪಾತ ಇದು. ಜಗತ್ತಿನ ಜನರನ್ನು ಈ ಜಲಪಾತ ತನ್ನತ್ತ ಕೈ ಮಾಡಿ ಕರೆದಿದೆ. ಇದನ್ನು ಗೇರುಸೊಪ್ಪೆಯ ತಡಸಲು, ಜೋಗ ಫಾಲ್ಸ್ ಎಂದು ಕರೆಯುತ್ತಾರೆ. ಇದನ್ನು ಮೀರಿಸುವ ಜಲಪಾತ ಜಗತ್ತಿನಲ್ಲಿ ಇಲ್ಲವೆನ್ನಬಹುದು. ನೀರು ಧುಮುಕುವ ತಾವಿನ ಹೆಸರು ಜೋಗ. ಅದಕ್ಕಾಗಿ ಈ ಜಲಪಾತಕ್ಕೆ ಜೋಗ ಜಲಪಾತ ಎಂಬ ಹೆಸರು ಬಂದಿದೆ. ಈ ಜಲಪಾತ ಧುಮುಕುವ ಗೋಡೆಯ ಭಾಗ ಶಿಲೆಯ ಭಾರಿ ದಪ್ಪದ ಪದರಿನಿಂದ ಕೂಡಿದೆ. ಕಮಾನಿನಂತೆ ಬಾಗಿದ ಈ ಗೋಡೆಯ ನಾಲ್ಕು ಬದಿಯಿಂದ ನೀರು ನಾಟ್ಯವಾಡುತ್ತಾ ಬೀಳುವುದನ್ನು

ನೋಡುವುದೇ ಚೆಂದ. ನೀರು ನೆಲಕ್ಕೆ ರಭಸದಿಂದ ಕುಪ್ಪಳಿಸುತ್ತಾ ನೀರೋ ನೊರೆಯೋ ಎಂಬ ಭೇದವಿಲ್ಲದೆ ಬೀಳುವ ಬಗೆ ಸೊಗಸಾಗಿದೆ.



ಜೋಗ್ ಜಲಪಾತ

ನೀರಿನ ಒಂದು ಸೀಳು ಮೇಲಿನಿಂದ ಕೆಳಕ್ಕೆ ಒಂದೇ ಜಿಗಿತದಲ್ಲಿ ಜಿಗಿಯುತ್ತದ. ಎರಡನೆಯ ಸೀಳು ಬಂಡೆಗಳ ಗೋಡೆಯನ್ನು ಕೊರೆದು ಒಂದು ಡೊಂಕಾದ ದಾರಿ ಮಾಡಿಕೊಂಡು ನಂತರ ಅರ್ಧಗೋಡೆಯಿಂದ ನೆಟ್ಟಗೆ ಕೆಳಗೆ ಧುಮುಕುತ್ತದೆ. ಉಳಿದ ಎರಡು ಸೀಳುಗಳು ಬಂಡೆಯ ಗೋಡೆಯ ಮೈಮೇಲೆ ಹಾರಿ ಕುಣಿದು ಅಪ್ಸರೆಯಂತೆ ನರ್ತಿಸುತ್ತಾ ಕೆಳಗೆ ಇಳಿಯುತ್ತವೆ. ಇದನ್ನು ರಾಜಾ, ರೋರರ್ (ಅಬ್ಬರ), ಲೇಡಿ (ರಾಣಿ), ರಾಕೆಟ್ ಎಂದು ಕರೆಯುತ್ತಾರೆ. ಮಳೆಗಾಲದಲ್ಲಿ ಜೋಗಜಲಪಾತ ಅತಿ ಸುಂದರವಾಗಿರುತ್ತದೆ. ಆಗ ಎಲ್ಲೆಡೆಯಿಂದಲೂ ಜನ ಜೋಗದ ಪ್ರವಾಸಕ್ಕೆ ಬರುತ್ತಾರೆ.

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆಂಬ ಮೋಡಿಯನ್ನು ಈ ಜಲಪಾತ ಮಾಡುತ್ತದೆ.

ಮಾನವನಾಗಿ ಹುಟ್ಟಿದ ಮ್ಯಾಲೆ ಏನೇನ ಕಂಡಿ
ಸಾಯೋತನಕ ಸಂಸಾರದಾಗೆ ಗಂಡಾಗುಂಡಿ
ಸತ್ ಮ್ಯಾಲೆ ಎತ್ಕಂಡ ಹೋಗೋದಿಲ್ಲ ಎತ್ತಿನ ಬಂಡಿ
ಸಾಯೋದ್ರೊಳಗೆ ಒಮ್ಮೆ ನೋಡು ಜೋಗದ ಗುಂಡಿ

ಎಂಬ ಕವಿತೆಯ ಸಾಲನ್ನು ನೆನಪಿಸಿಕೊಳ್ಳಬಹುದು. ಸಾಯುವ ಮೊದಲು ಒಂದು ಸಲವಾದರೂ ಜೋಗವನ್ನು ನೋಡಬೇಕು. ಆಗ ಜೀವನ ಸಫಲವಾಗುತ್ತದೆ.

ಮಾಗೋಡು ಜಲಪಾತ: ಇದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನಲ್ಲಿದೆ. ಯಲ್ಲಾಪುರದಿಂದ ಹತ್ತೊಂಭತ್ತು ಕಿ.ಮೀ. ದೂರವಿರುವ ಬೇಡ್ತಿ ನದಿಯ ಜಲಪಾತ ಇದಾಗಿದೆ. ಬೇಡ್ತಿ ಎನ್ನುವುದು ಗಂಗಾವತಿ ನದಿಗೆ ಇರುವ ಇನ್ನೊಂದು ಹೆಸರು.



ಮಾಗೋಡು ಜಲಪಾತ

ಬೇಡ್ತಿ ನದಿ ಬೆಟ್ಟದ ಇಳಿಜಾರಿನಲ್ಲಿ ಹಂತಹಂತವಾಗಿ ಧುಮುಕುತ್ತದೆ. ಹಾಲಿನ ನೊರೆಯಂತೆ ನಯವಾಗಿ ಮಾಗೋಡು ಎಂಬ ಹಳ್ಳಿಯ ಬಳಿ ಧುಮುಕುವ ಈ ಜಲಪಾತ ನಯನ ಮನೋಹರವಾಗಿದೆ. ಅಡವಿಯ ನಡುವಿರುವ ಈ ಜಲಪಾತ ದೂರದೂರಿನ ಜನರನ್ನು ತನ್ನ ಕಡೆ ಸೆಳೆದಿದೆ. ಸ್ವಾದಿಯ ಅರಸ ಮಾಗೋಡದಲ್ಲಿ ತನ್ನ ಪ್ರೇಯಸಿಯ ರಕ್ಷಣೆಗಾಗಿ ಚಕ್ರವ್ಯೂಹದ ರೀತಿಯ ಕೋಟೆ ಕಟ್ಟಿಸಿದ್ದ. ಅದಕ್ಕಾಗಿ ಈ ಜಲಪಾತಕ್ಕೆ ಹೊಲತಿ ಜೋಗ ಎಂಬ ಹೆಸರು ಬಂದಿದೆ.

ಗೋಕಾಕ ಜಲಪಾತ: ಇದು ಗೋಕಾಕ ಪಟ್ಟಣಕ್ಕೆ ಸ್ವಲ್ಪವೇ ದೂರದಲ್ಲಿ ಇದೆ. ಇದು ಘಟಪ್ರಭಾ ನದಿಯ ಸುಂದರ ಜಲಪಾತ. ಈ ಜಲಪಾತ ಕುದುರೆ ಲಾಳದ ಆಕಾರದಲ್ಲಿದೆ.



ಗೋಕಾಕ ಜಲಪಾತ

ದೊಪ್ಪನೆ ಧುಮುಕುವ ನದಿಯ ವಿಲಾಸ ಒಂದು ಕಡೆ. ಇನ್ನೊಂದು ಕಡೆ ಸಾಕ್ಷಿಕಂಬಗಳಂತೆ ನಿಂತ ಬಂಡೆ ಗೋಡೆಗಳದೆ ಚೆಂದ. ಈ ಜಲಪಾತದಿಂದ ನೂರಾರು ಅಡಿ ಎತ್ತರಕ್ಕೆ ತುಂತುರು ಹನಿ ಹಾರುತ್ತದೆ. ಅಲ್ಲಿ ಕಾಣುವ ಕಾಮನಬಿಲ್ಲಿನ ಚೆಂದವು ಅನುಪಮವಾಗಿದೆ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೂ ಈ ಜಲಪಾತ ನೋಡಲು ಹೆಚ್ಚು ಸುಂದರವಾಗಿರುತ್ತದೆ. ಇಲ್ಲಿ ಒಂದು ಸಾಮಾನ್ಯ ವಿದ್ಯುತ್ ಉತ್ಪಾದನಾ ಕೇಂದ್ರವಿದೆ. ಅದು ಸುತ್ತಲಿನ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಿಕೊಟ್ಟಿದೆ.

ಉಂಚಳ್ಳಿ ಜಲಪಾತ: ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ಬಳಿ ಈ ಜಲಪಾತ ಇದೆ. ಇದು ಉಂಚಳ್ಳಿ ಎಂಬ ಗ್ರಾಮದಲ್ಲಿ ಇದೆ. ಅಘನಾಶಿನಿ ನದಿಯೇ ದೋಣಿ ಹಳ್ಳ ಎಂಬ ಹೆಸರಿನಿಂದ ಇಪ್ಪತ್ತನಾಲ್ಕು ಕಿಲೋಮೀಟರ್ ಹರಿದು ಬಿಳಗಿಯ ಉತ್ತರಕ್ಕೆ ಹದಿಮೂರು ಕಿಲೋಮೀಟರ್ ದೂರದಲ್ಲಿ ಕೆಳಗೆ ಧುಮುಕಿದೆ ಇದೇ ಉಂಚಳ್ಳಿ ಜಲಪಾತ. ಕರಿ ಬಂಡೆಗಳ ಮೇಲೆ ಹಾಲಿನ ನೊರೆಯಂತೆ ಇಳಿದು ಬರುವ ಜಲಧಾರೆಯ ಸೊಬಗು ನೋಡುವಂತಹುದು. ಜಲಪಾತದ ಸುತ್ತಮುತ್ತ ಇರುವ ಗಿರಿ-ಕಂದರ, ಅಡಿಕೆ ತೋಟ, ದಟ್ಟವಾದ ಅಡವಿ, ಅಖಂಡವಾದ ಕರಿಕಲ್ಲುಗಳು ಒಂದೊಂದೂ ಸುಂದರವಾಗಿದೆ. ಈ ಜಲಪಾತದ ಸದ್ದು ಜೋರಾಗಿದೆ. ಉಂಚಳ್ಳಿಯಿಂದ ಹದಿಮೂರು ಕಿ.ಮೀ. ದೂರವಿರುವ ಬೀಳಗಿಯವರೆಗೂ ಕೇಳುತ್ತದೆ. ಇದರ ಶಬ್ದ ಕಿವಿಯನ್ನು ಕಿವುಡಾಗಿಸುವಷ್ಟು ಜೋರಾಗಿ ಇದೆ. ಆದ್ದರಿಂದ ಇದಕ್ಕೆ ಕೆಪ್ಪ ಜೋಗವೆಂದು ತಮಾಷೆ ಮಾಡಿ ಕರೆಯುತ್ತಾರೆ. ಟಿ.ಡಿ. ಲುಸಿಂಗಟನ್ ಎಂಬುವರು ಆಗ ಜಿಲ್ಲಾಧಿಕಾರಿಯಾಗಿದ್ದರು. ಹೊರಗಿನ ಜಗತ್ತಿಗೆ ಈ ಜಲಪಾತವನ್ನು ಅವರು ಪರಿಚಯಿಸಿದರು. ಆದ್ದರಿಂದ ಇದನ್ನು ಲುಸಿಂಗಟನ್ ಜಲಪಾತ ಎಂದು ಕರೆಯುತ್ತಾರೆ.

ಬುರುಡೆ ಜಲಪಾತ: ಉಂಚಳ್ಳಿ ಜಲಪಾತದಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿ ಬುರುಡೆ ಜೋಗವಿದೆ. ಅಲ್ಲಿ ಅಘನಾಶಿನಿ ನದಿ ಸುಮಾರು ಮುನ್ನೂರು ಅಡಿ ಕೆಳಗೆ ಉರುಳಿ ಅನಂತರ ಎರಡು ಶಾಖೆಗಳಾಗಿದೆ. ಅದು ನೂರಾ ಐವತ್ತು ಅಡಿ ಹಾರಿ

ಮತ್ತೆ ಸ್ವಲ್ಪ ದೂರ ಹರಿದು ಮತ್ತೊಂದು ಜಲಪಾತವನ್ನುಂಟುಮಾಡಿದೆ. ಸುಂದರ ಪರಿಸರದಲ್ಲಿರುವ ಬುರುಡೆ ಜೋಗವು ನೋಡಲು ಚೆನ್ನಾಗಿದೆ.

ಲಾಲಗುಳಿ ಜಲಪಾತ: ಇದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಉತ್ತರಕ್ಕೆ ಲಾಲಗುಳಿ ಎಂಬ ಹಳ್ಳಿಯಲ್ಲಿ ಇದೆ. ಈ ಜಲಪಾತ ಕಾಳಿ ನದಿಯಿಂದ ಆಗಿದೆ. ತಟ್ಟೆ ಹೊಳೆ ಕಾಳಿ ನದಿಗೆ ಸೇರುವ ಸ್ಥಳದಲ್ಲಿ ಕಾಳಿ ನದಿ ಸುಮಾರು ನೂರು ಮೀಟರು ಎತ್ತರದಿಂದ ಹಂತಹಂತವಾಗಿ ಧುಮುಕುತ್ತದೆ. ಈ ಜಲಪಾತದ ಸಪ್ಪಳ ಶಾಂತ ವೇಳೆಯಲ್ಲಿ ಸುಮಾರು ಹದಿನಾರು ಕಿ.ಮೀ.ವರೆಗೆ ಕೇಳಿಸುತ್ತದೆ. ಲಾಲಗುಳಿ ಜಲಪಾತ ನೋಡಲು ತುಂಬಾ ಸುಂದರವಾಗಿದೆ. ನಿಸರ್ಗದ ಹಿನ್ನೆಲೆ ಇದರ ಚೆಂದವನ್ನು ಹೆಚ್ಚು ಮಾಡಿದೆ. ಸೋದೆಯ ಅರಸರು ಹಿಂದೆ ಮರಣ ದಂಡನೆಗೆ ಗುರಿಯಾದವರನ್ನು ಲಾಲಗುಳಿ ಜಲಪಾತದ ಆಳಕ್ಕೆ ದೂಡಿ ಕೊಲ್ಲುತ್ತಿದ್ದರು ಎಂದು ಹೇಳಲಾಗುತ್ತದೆ.

ಶಿವಗಂಗಾ ಜಲಪಾತ

ಇದು ಶಿರಸಿ ತಾಲೂಕಿನ ಗಣೇಶಪಾಲ ಅಥವಾ ಸೋಂದಾ ನದಿಯ ಜಲಪಾತ. ಶಿರಸಿಗೆ ಅನತಿ ದೂರದಲ್ಲಿ ಈ ಜಲಪಾತವಿದೆ. ಹುಲೇಕಲ್ಲಿನಿಂದ ಸಂಪಗದ್ದೆಗೆ ಹೋಗಿ ಅಲ್ಲಿಂದ ಮೆರಶಿ ಸೀಮೆಯನ್ನು ತಲುಪಬೇಕು. ಅಲ್ಲಿ ಗಣೇಶಪಾಲ ಹೊಳೆ ಎರಡು ಕವಲುಗಳಾಗಿದೆ. ಇದು ಮೊದಲು ಸುಮಾರು ನೂರು ಮೀಟರ್ ಧುಮುಕಿ ಮತ್ತೆ ಕವಲಾಗಿ ಅರವತ್ತು ಮೀಟರು ಧುಮುಕುವುದು. ನೀರು ಬೀಳುವ ಸ್ಥಳದಲ್ಲಿ ಎರಡು ಕರಿಕಲ್ಲಿನ ಗುಡ್ಡಗಳು ಗೋಡೆಗಳಂತೆ ಇವೆ. ತಡಸಲಿನ ಎದುರುಗಡೆಯ ದೊಡ್ಡ ಗೋಡೆಯ ಮೇಲೆ ಶಿವನ ಮೂರ್ತಿ, ಜೋಗಿ ಪಕ್ಷಿ ಹಾಗೂ ಶಿಲಾಲೇಖನಗಳನ್ನು ಕೆತ್ತಲಾಗಿದೆ. ಈ ಜಲಪಾತದ ಕೆಳಗಿನ ಮಡುವಿನಲ್ಲಿ ಶಿವ ಮತ್ತು ಗಂಗೆಯರ ಶಿಲಾಮೂರ್ತಿಗಳು ಇವೆ. ಆದ್ದರಿಂದ ಇದಕ್ಕೆ ಶಿವಗಂಗಾ ಜಲಪಾತ ಎಂಬ ಹೆಸರು ಬಂದಿದೆ.

ಗಣೇಶಪಾಲ ಹೊಳೆಯ ಮೇಲ್ಗಡೆ ಇರುವ ಜಲಪಾತವು ಸುಂದರವಾಗಿದೆ. ಈ ಜಲಪಾತ ಮೇಲ್ಗಡೆ ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಹೊಳೆಯ



ಶಿವಗಂಗೆ ಜಲಪಾತ

ಮಧ್ಯೆ ಗಣೇಶಪಾಲ ಎಂಬ ಚಿಕ್ಕ ನಡುಗಡ್ಡೆ ಇದೆ. ಇಲ್ಲಿ ಶಿಲೆಯ ಗಣೇಶನ ಮೂರ್ತಿ ಇದೆ. ಈ ಗಣೇಶ ಮೂರ್ತಿ ಇರುವಲ್ಲಿ ಹೊಳೆ ಎರಡು ಭಾಗವಾಗಿ ಹರಿದಿದೆ. ಆದ್ದರಿಂದ ಈ ನದಿಗೆ ಗಣೇಶಪಾಲ ಎಂಬ ಹೆಸರು ಬಂದಿದೆ. ಈ ನದಿ ಉಂಟುಮಾಡಿದ ಜಲಪಾತ ಸುಂದರವಾಗಿದೆ.

ಒನಕೆ ಅಬ್ಬಿ ಜಲಪಾತ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಜಲಪಾತವಿದೆ. ಆಗುಂಬೆಗೆ ತುಂಬಾ ಸಮೀಪದಲ್ಲಿ, ಘಟ್ಟಕ್ಕೆ ಸೇರುವ ದಾರಿಯಲ್ಲಿ ಈ ಜಲಪಾತವಿದೆ. ಇದು 'ಒನಕೆ'ಯಂತೆ ನೆಟ್ಟಗೆ ಸಪೂರವಾಗಿ ಮುನ್ನೂರು ಅಡಿ ಎತ್ತರದಿಂದ ಧುಮುಕುತ್ತದೆ. ಆದ್ದರಿಂದ ಈ ಜಲಪಾತಕ್ಕೆ ಒನಕೆ ಅಬ್ಬಿ ಎಂಬ ಹೆಸರು ಬಂದಿದೆ. ನೀರು ಮೇಲಿನಿಂದ ಬೀಳುವುದಕ್ಕೆ ಅಬ್ಬಿ ಎಂದು ಕರೆಯುತ್ತಾರೆ. ಅಬ್ಬಿ ಎಂದರೂ ಜಲಪಾತವೇ. ಇದೇ ನದಿ ಮುಂದೆ ಹರಿದು ಇನ್ನೊಂದು ಜಲಪಾತವಾಗಿ ಕಾಣಿಸುತ್ತದೆ. ಅದರ ಸೊಬಗು ಇನ್ನೂ ಹೆಚ್ಚಿನದೇ ಆಗಿದೆ.

ಬರ್ಕಣ ಜಲಪಾತ: ಸೀತಾನದಿ ಸಹ್ಯಾದ್ರಿಯ ಗೋಡೆಗಳಿಂದ ಎರಡೆರಡು ಕಡೆಗಳಲ್ಲಿ ಧುಮುಕುತ್ತದೆ. ಅದು ಮೊದಲು ಧುಮುಕಿದ ತಾಣವನ್ನು 'ಬರ್ಕಣ' ಜಲಪಾತ ಎಂದು ಕರೆಯುತ್ತಾರೆ. ಈ ಜಲಪಾತ ನೋಡಲು ಹೋಗುವ ದಾರಿಯೂ ಇದೆ. ವರ್ಷದಲ್ಲಿ ಆರು ತಿಂಗಳು ಈ ಜಲಪಾತ ಗೋಚರಿಸುತ್ತದೆ. ಇದು ಚೆಂದದ ಜಲಪಾತ. ಇದು ಧುಮುಕುವ ಜಾಗದಿಂದ ಕಾಣುವ ಪಡುವಣದ ಪರ್ವತವಾಣಿಗಳ ದೃಶ್ಯ ಸೊಬಗಿನಿಂದ ಕೂಡಿದೆ. ಅದೇ ಸೀತಾನದಿ ಘಟ್ಟದ ಕೊರಕಲಿನಲ್ಲಿ ಮುಂದುವರಿದು ಕಣಿವೆಗೆ ಇಳಿಯುವ ಮೊದಲು ಇಕ್ಕಟ್ಟಾದ ಜಾಗದಲ್ಲಿ ಇನ್ನೂರು ಅಡಿ ಆಳದ ಜಲಪಾತವಾಗಿ ಧುಮುಕುತ್ತದೆ. ಇದರ ಸುತ್ತ ಗೋಡೆ ಪಾಟಿಯಂತೆ ಪದರು ಕಲ್ಲಿನಿಂದ ಕೂಡಿದೆ. ಸೀತಾನದಿ ಮುಂದೆ ಪದರುಕಲ್ಲಿನ ಬಂಡೆಯನ್ನು ಕೊರೆದು ಅಂಕುಡೊಂಕಾದ ದಾರಿಯಲ್ಲಿ ಸಾಗುವುದನ್ನು ನೋಡುವುದೇ ಚೆಂದ.

ಭರಚುಕ್ಕಿ-ಗಗನಚುಕ್ಕಿ ಜಲಪಾತಗಳು: ಕೊಡಗಿನಲ್ಲಿ ಹುಟ್ಟಿದ ಕಾವೇರಿ ನದಿ ಉಂಟು ಮಾಡಿದ ಸುಂದರ ಜಲಪಾತಗಳು ಇವು. ಈ ನದಿ ಬಹಳ ದೂರ ಹರಿದ ನಂತರ ಕೊಳ್ಳೆಗಾಲಕ್ಕೆ ಎಂಟು ಮೈಲು ದೂರದಲ್ಲಿ ಒಂದು ಕಡೆ ಎರಡು ಸೀಳಾಗಿದೆ. ಆ ಜಾಗದ ಹೆಸರು ಶಿವಸಮುದ್ರ. ಒಂದು ಸೀಳು ಇನ್ನೂರು ಅಡಿ ಆಳಕ್ಕೆ ಧುಮುಕುತ್ತದೆ. ಇನ್ನೊಂದು ಸೀಳು ಮುನ್ನೂರು ಅಡಿ ಆಳಕ್ಕೆ ಧುಮುಕುತ್ತದೆ. ಈ ಎರಡು ಜಲಪಾತ

ಗುಡ್ಡಗಾಡಿನ ನಡುವಿದೆ. ಬೆಟ್ಟದ ಮೇಲಿನಿಂದ ನದಿ ಎರಡು ಸೀಳಾಗಿ ಬೀಳುವ ಬಗೆ ಅತ್ಯಂತ ಮನೋಹರವಾಗಿದೆ. ಹಿಂದಿನವರು ಎರಡು ಸೀಳು ಉಂಟು ಮಾಡಿದ ಜಾಗವನ್ನು



ಗಗನ ಚುಕ್ಕಿ

'ಗಗನಚುಕ್ಕಿ', 'ಭರಚುಕ್ಕಿ' ಎಂದು ಕರೆದರು. ಬಹಳ ಹಿಂದೆ ಹೀಗೆ ಧುಮುಕಿದ ನೀರಿನ ಶಕ್ತಿಯನ್ನು ಬಳಸಿ ವಿದ್ಯುತ್ ಪಡೆಯುವ ಕೇಂದ್ರ ಸ್ಥಾಪಿಸಿದರು. ಈ ಜಲಪಾತವನ್ನು ಶಿಂಷಾ ಜಲಪಾತ ಎಂದೂ, ಬ್ಲಫ್ ಎಂದೂ ಕರೆಯುತ್ತಾರೆ. ಶಿವಸಮುದ್ರ ಎಂದು ಸಹ ಇದನ್ನು ಕರೆಯುತ್ತಾರೆ.

ಕಲ್ಹತ್ತಿ ಜಲಪಾತ: ಶಿವಮೊಗ್ಗ ಜಿಲ್ಲೆಯ ತರಿಕೆರೆ ತಾಲೂಕಿನಲ್ಲಿ ಈ ಜಲಪಾತವಿದೆ. ಇದು ಸುಮಾರು ನಾನ್ನೂರು ಅಡಿ ಎತ್ತರದಿಂದ ಧುಮುಕುತ್ತದೆ. ಈ ಜಲಪಾತವನ್ನು ಕೆಳಗಿನಿಂದ ನೋಡಿದಾಗ ಅದರ ಸೊಬಗು ಮನಸ್ಸನ್ನು ಸೆರೆಹಿಡಿಯುವಂತಿದೆ.

ಅಬ್ಬೆ ಫಾಲ್ಸ್: ಮಡಿಕೇರಿಯಿಂದ ಹತ್ತು ಮೈಲು ದೂರದಲ್ಲಿರುವ 'ಅಬ್ಬೆ ಫಾಲ್ಸ್' ಹಾಗೂ ಕೆಮ್ಮಣ್ಣುಗುಂಡಿಯಿಂದ ಸುಮಾರು ಹತ್ತು ಮೈಲು ದೂರದಲ್ಲಿರುವ 'ದೊಡ್ಡಬ್ಬೆ ಫಾಲ್ಸ್' ನೋಡುವಂತಹ ಜಲಪಾತಗಳಾಗಿವೆ. ಬಾಬಾ ಬುಡನಗಿರಿ ಬೆಟ್ಟದಲ್ಲಿರುವ 'ಮಾಣಿಕ್ಯ ಧಾರಾ' - ಇದು ಇನ್ನೊಂದು ಹೆಸರಿಸಬೇಕಾದ ಜಲಪಾತವಾಗಿದೆ. ಇದು ಸುಮಾರು ಇನ್ನೂರು ಅಡಿ ಎತ್ತರದಿಂದ ಧುಮುಕುತ್ತದೆ. ಇದರ ನೀರಿನಲ್ಲಿ ಮಿಂದವರಿಗೆ ಚರ್ಮರೋಗ ಗುಣವಾಗುತ್ತದೆ. ಮಕ್ಕಳಾಗದೆ ಇದ್ದವರಿಗೆ ಮಕ್ಕಳಾಗುತ್ತದೆ ಎಂಬ ನಂಬಿಕೆ ಈ ಭಾಗದ ಜನರಲ್ಲಿ ಇದೆ.

ದಬ್ಬೆ ಸಾಲು ಜಲಪಾತ: ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನಲ್ಲಿ, ಅಲ್ಲಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿ ಇರುವ 'ದಬ್ಬೆ ಸಾಲು' ಜಲಪಾತ ತುಂಬಾ ಸುಂದರವಾಗಿದೆ.

ವಜ್ರ ಜಲಪಾತ: ಸಿರಸಿಯ ಸ್ವಾದಿಯಿಂದ ಸುಮಾರು ಎರಡು, ಮೂರು ಮೈಲು ದೂರದಲ್ಲಿರುವ 'ವಜ್ರ' ಜಲಪಾತವೂ ಸುಂದರವಾಗಿದೆ. ವಜ್ರದ ಆಕಾರದಲ್ಲಿ ಈ ಜಲಪಾತ ಧುಮುಕುವುದರಿಂದ ಈ ಹೆಸರು ಬಂದಿದೆ ಎಂದು ಹೇಳುತ್ತಾರೆ.

ಜಲಪಾತಗಳು ನಿಸರ್ಗದ ಸುಂದರ ಕೊಡುಗೆಗಳು. ಮಳೆಗಾಲದಲ್ಲಿ ಪಶ್ಚಿಮ ಘಟ್ಟಗಳ ಕಡಿದಾದ ಗೋಡೆಯಂತಹ ಗುಡ್ಡದಲ್ಲಿ ನಿರ್ಮಾಣವಾಗುವ ಅನೇಕ ಜಲಪಾತಗಳನ್ನು ನೋಡುವುದೇ ಒಂದು ಹಬ್ಬ. ಮಳೆಗಾಲದ ಕಾಮನ ಬಿಲ್ಲು ನಿಸರ್ಗ ನಿರ್ಮಿಸಿದ ಬಾನದೇವಿಯ ಮಣಿ ಹಾರದಂತೆ ಕಾಣುತ್ತದೆ. ಹಾಗೆ ಜಲಪಾತದ ಸಮೀಪ ನಿರ್ಮಾಣಗೊಳ್ಳುವ ಕಾಮನ ಬಿಲ್ಲಿನದು ಮತ್ತೊಂದು ಬಗೆಯ ಚೆಲುವು. ಸುಂದರವಾದ

ನಿಸರ್ಗದ ಹಿನ್ನೆಲೆಯಲ್ಲಿ ಧುಮುಕುವ ಜಲಪಾತ ಚೆಂದ. ಸುರನಾರಿಯರು ಗುಡ್ಡ ಓರೆಯಲ್ಲಿ ಝರಿ ಸೀರೆಯುಟ್ಟು ನರ್ತಿಸಿದಂತೆ ಜಲಪಾತ ಕಾಣುತ್ತದೆ. ಜಲಪಾತದ ಧುಮುಕುವಿಕೆ ಕಣ್ಣಿಗೆ ಆನಂದ ನೀಡುತ್ತದೆ. ಅದರ ಭೋರ್ಗರೆಯುವ ಸಂಗೀತ ಕಿವಿಗೆ ಸಂತಸವನ್ನು ಕೊಡುತ್ತದೆ.

ಈ ನಿಸರ್ಗ ಮತ್ತು ಅದು ನಿರ್ಮಿಸಿದ ಜಲಪಾತ ಮಾನವನಿಗೆ ಖುಷಿ ಕೊಡಲು ನಿರ್ಮಾಣವಾದಂತಿದೆ. ಅದನ್ನು ನೋಡುವ ಅನುಭವಿಸುವ, ಸುಖಿಸುವ ಮನಸ್ಸು ಮಾತ್ರ ಮಾನವನಿಗೆ ಇರಬೇಕು. ನಿಸರ್ಗ-ಜಲಪಾತಗಳಲ್ಲಿ ಚೆಲುವು ಚೆಲ್ಲುವರಿದಿದೆ. ಅದನ್ನು ಕಂಡು ಆನಂದಸುವವರ ಎದೆಯಲ್ಲಿ ಆನಂದದ ಹೊಳೆಯೇ ಹರಿದಿದೆ.

***

ಕನ್ನಡ ವಿಶ್ವವಿದ್ಯಾಲ … ಟ್ಟದವರೆಗೆ ಉತ್ತಮ
ಹಾಗೂ ಉಪಯುಕ್ತ … ರ್ಯಪುಸ್ತಕ ರಚನಾ
ವಿಭಾಗ'ವನ್ನು ತೆರೆದ … ಠ್ಯಪುಸ್ತಕ ರಚನೆ
ಮಾಡಬೇಕೆಂದು ಚಿಂ … ನವಸಾಕ್ಷರರಿಗಾಗಿ
ಪುಸ್ತಕ ಬರೆಸುವ ತ … ವಹಿಸಿಕೊಟ್ಟರು.
ವಿಶ್ವವಿದ್ಯಾಲಯವು ಆ … ತ ಲೇಖಕರನ್ನು,
ಭಾಷಾತಜ್ಞರನ್ನು, ಶಿಕ್ಷ … ರ ಅಭಿಪ್ರಾಯ,
ಸಲಹೆ, ಸಹಕಾರಗಳನ … ುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ, … ಸಲ ಚರ್ಚಿಸಿ
ಯೋಜನೆಯನ್ನು ಅನ …

ನವಸಾಕ್ಷರರಿಗಾಗಿ ಕ … ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ … ಭಾಷಾತಜ್ಞರಿಂದ
ಪರಿಶೀಲಿಸಲಾಯಿತು. … ೊಂಡು ಅವರಿಗೆ
ಕಮ್ಮಟಗಳನ್ನು ನಡೆ … ಆಯ್ದ ಜಿಲ್ಲೆ,
ತಾಲೂಕುಗಳಿಗೆ ಕಳುಹಿ … ವರಿಂದ ಅದರ
ಗುಣದೋಷಗಳ ಬಗ್ಗೆ … ಶ್ವವಿದ್ಯಾಲಯದ
ಗಣಕಯಂತ್ರದಲ್ಲಿ ವಿ … ುಕರು ನೀಡಿದ್ದ
ಮಾಹಿತಿಗಳನ್ನೆಲ್ಲ ಮ … ವಾಗಿ ವಿಷಯದ
ಆದ್ಯತೆಗಳನ್ನು ನಿರ್ಧ … ಖಕರು ನಮ್ಮ
ವಿಶ್ವವಿದ್ಯಾಲಯದ ಪ … ೂಪ ಕೊಟ್ಟರು.
ಕಲಾವಿದರು ವಿಷಯಗ … ಹಸ್ತಪ್ರತಿಗಳನ್ನು
ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು